# ಹಂಪಿ ಟೈಮ್ಸ್
# HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಸಂಪುಟ:01 • ಸಂಚಿಕೆ:304 • ನೋಂದಣಿ ನಂ.:KARKAN27911 • ವಿಜಯನಗರ • 03.05.2024 • ಶುಕ್ರವಾರ • ಪುಟ:04 • ಬೆಲೆ:2
Volume:01 • Issue:304 • Reg.No:KARKAN27911 • VIJAYANAGARA • 03.05.2024 • Friday • Page:04 • Rs:2



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ.



ಹಂಪಿ ಟೈಮ್ಸ್ ಇ-ಪೇಪರ್ ಓದುಗರ ಸಂಖ್ಯೆ
55,000
Plus readers
9448633038
Place Your Ads
Reach New Audience
hampitimes@gmail.com Valmiki Circle, Hosapete-583201


### ವಿಜಯನಗರ ಜಿಲ್ಲೆಯಲ್ಲಿ ಒಟ್ಟು 193 ಹಳ್ಳಿಗಳಲ್ಲಿ 244 ಖಾಸಗಿ ಬೋರ್‌ವೆಲ್‌ಗಳಿಂದ ನೀರು ಪೂರೈಕೆ

# ಬಿಸಿಗಾಳಿ ಅಧಿಕವಾಗುವ ಸಾಧ್ಯತೆ ಕುಡಿವ ನೀರು ಮೇವು ಪೂರೈಸಿ

### ಜಿಲ್ಲಾಮಟ್ಟದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಡಿಸಿ ಎಂ.ಎಸ್.ದಿವಾಕರ ನಿರ್ದೇಶನ ಬೋರ್‌ವೆಲ್ ಮಾಲೀಕರಿಗೆ ಹಣ ಪಾವತಿಸಿ । ನಗರದಲ್ಲೂ ನೀರು ಪೂರೈಕೆಯಲ್ಲಿ ನಿರ್ಲಕ್ಷ್ಯ ಸಲ್ಲದು

■ **ಹಂಪಿ ಟೈಮ್ಸ್ ಹೊಸಪೇಟೆ**

ಬೇಸಿಗೆ ಹಿನ್ನೆಲೆಯಲ್ಲಿ ವಿಜಯನಗರ ಜಿಲ್ಲೆಯ ಯಾವುದೇ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ಮತ್ತು ಜಾನುವಾರುಗಳಿಗೆ ಮೇವಿನ ಲಭ್ಯತೆಗೆ ಅಗತ್ಯ ಕ್ರಮ ವಹಿಸಬೇಕು ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಸಂಬಂಧಿಸಿದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಜಿಲ್ಲಾಡಳಿತ ಭವನದಲ್ಲಿನ ಕೇಸ್ವಾನ್ ವಿಡಿಯೋ ಸಭಾಂಗಣದಲ್ಲಿ ಜಿಲ್ಲಾ ಹಾಗೂ ತಾಲೂಕುಮಟ್ಟದ ಅಧಿಕಾರಿಗಳೊಂದಿಗೆ ಗುರುವಾರ ಜಿಲ್ಲಾಮಟ್ಟದ ವಿಪತ್ತು ನಿರ್ವಹಣಾ ಪ್ರಾಧಿಕಾರದ ವಿಡಿಯೋ ಸಂವಾದ ಸಭೆ ನಡೆಸಿ ಮಾತನಾಡಿದರು.

ವಿಜಯನಗರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸದ್ಯದ ಪರಿಸ್ಥಿತಿಯ ಕುರಿತು ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿಗಳು ಮಾಹಿತಿ ಪಡೆದರು. ಕೂಡ್ಲಿಗಿ ತಾಲೂಕಿನ 33 ಗ್ರಾಮಗಳಲ್ಲಿ 36 ಖಾಸಗಿ ಬೋರವೆಲ್, ಕೊಟ್ಟೂರ ತಾಲೂಕಿನಲ್ಲಿ 11 ಗ್ರಾಮಗಳಲ್ಲಿ 15 ಖಾಸಗಿ ಬೋರವೆಲ್, ಹರಪನಹಳ್ಳಿ ತಾಲೂಕಿನಲ್ಲಿ 85 ಗ್ರಾಮಗಳಲ್ಲಿ 111 ಖಾಸಗಿ ಬೋರವೆಲ್, ಹೊಸಪೇಟೆ ಗ್ರಾಮೀಣ ಪ್ರದೇಶದ 13 ಹಳ್ಳಿಗಳಲ್ಲಿ 18 ಖಾಸಗಿ ಬೋರವೆಲ್, ಹಡಗಲಿ ತಾಲೂಕಿನ 19 ಗ್ರಾಮಗಳಲ್ಲಿ 23 ಖಾಸಗಿ ಬೋರವೆಲ್‌ಗಳು ಹಾಗೂ ಹಗರಿಬೊಮ್ಮನಹಳ್ಳಿ ತಾಲೂಕಿನ 32 ಗ್ರಾಮಗಳಲ್ಲಿ 41 ಖಾಸಗಿ ಬೋರವೆಲ್‌ಗಳ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ ಎಂದು ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು ಸಭೆಗೆ ತಿಳಿಸಿದರು.

ಕಾಲಕಾಲಕ್ಕೆ ಈ ಖಾಸಗಿ ಬೋರವೆಲ್‌ಗಳಿಗೆ ಮಾಸಿಕ ಬಾಡಿಗೆ ವೆಚ್ಚವನ್ನು ಪಾವತಿಸಲು ಅಧಿಕಾರಿಗಳು ಮುತುವರ್ಜಿ ವಹಿಸಬೇಕು ಎಂದು ಇದೆ ವೇಳೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.



ಸಭೆಯಲ್ಲಿ ಮೇವಿನ ಲಭ್ಯತೆಯ ಬಗ್ಗೆ ಜಿಲ್ಲಾಧಿಕಾರಿಗಳು ಅಧಿಕಾರಿಗಳೊಂದಿಗೆ ಚರ್ಚಿಸಿದರು. ಕೂಡ್ಲಿಗಿ ತಾಲೂಕಿನಲ್ಲಿ ಮೇವು ಬ್ಯಾಂಕ್ ಪ್ರಾರಂಭಿಸಲಾಗಿರುತ್ತದೆ. ಅದರ ಮೂಲಕ 43,740 ಕೆ.ಜಿ.ಮೇವನ್ನು ರೈತರಿಗೆ ವಿತರಿಸಲಾಗಿದೆ ಎಂದು ತಹಸೀಲ್ದಾರರು ಸಭೆಗೆ ಮಾಹಿತಿ ನೀಡಿದರು. ಅದೇ ರೀತಿ ಕೂಡ್ಲಿಗಿ ತಾಲೂಕಿನ ಗಂಡಬಮ್ಮನಳ್ಳಿ ಪಂಚಾಯಿತಿಯಲ್ಲಿ ಗೋಶಾಲೆಯನ್ನು ಆರಂಭಿಸಲಾಗಿದೆ ಎಂದು ತಿಳಿಸಿದರು. ಈ ಗೋಶಾಲೆಗೆ ಸೂಕ್ತವಾದ ಶೆಡ್ ಮತ್ತು ವಿದ್ಯುತ್ ಸಂಪರ್ಕ ಕಲ್ಪಿಸಲು ಅಗತ್ಯ ಕ್ರಮವಹಿಸಬೇಕು ಎಂದು ಸಭೆಯಲ್ಲಿ ಹಾಜರಿದ್ದ ತಹಸೀಲ್ದಾರರು ಮತ್ತು ಜೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು.

ನಗರ ಪ್ರದೇಶಗಳಲ್ಲಿ ಯಾವುದೇ ವಾರ್ಡಗಳಲ್ಲಿ ಕುಡಿಯುವ ನೀರು ಸರಬರಾಜಿನಲ್ಲಿ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ವಿಶೇಷವಾಗಿ ನೀರನ್ನು ಶುಚಿಗೊಳಿಸಿ ಸರಬರಾಜು ಮಾಡಲು ಎಲ್ಲಾ ಪುರಸಭೆ ಪಟ್ಟಣ ಪಂಚಾಯಿತಿಗಳ ಮುಖ್ಯಾಧಿಕಾರಿಗಳಿಗೆ ತಿಳಿಸಿ ಅಗತ್ಯ ಕ್ರಮ ವಹಿಸಬೇಕು ಎಂದು ಇದೆ ವೇಳೆ ಜಿಲ್ಲಾಧಿಕಾರಿಗಳು ನಗರಸಭೆ ಪೌರಾಯುಕ್ತರಾದ ಚಂದ್ರಪ್ಪ ಅವರಿಗೆ ನಿರ್ದೇಶನ ನೀಡಿದರು.

> **ಜಿಲ್ಲೆಯಲ್ಲಿ ಇನ್ನೂ ವಾರದಮಟ್ಟಿಗೆ ಬಿಸಿ ಗಾಳಿ (ಹೀಟ್ ವೇವ್) ಹೆಚ್ಚಾಗುವ ಸಾಧ್ಯತೆ ಇದ್ದು, ಅಧಿಕಾರಿಗಳು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಹಾಗು ತಮ್ಮ ಪಂಚಾಯಿತಿ ಮತ್ತು ಗ್ರಾಮಮಟ್ಟದಲ್ಲಿ ಜಾನುವಾರುಗಳಿಗೆ ಸೂಕ್ತವಾದ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು**
>
> – ಎಂ.ಎಸ್.ದಿವಾಕರ ಜಿಲ್ಲಾಧಿಕಾರಿ

ವಿಡಿಯೋ ಸಂವಾದ ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳಾದ ಸದಾಶಿವ ಪ್ರಭು ಜಿ., ಅಪರ ಜಿಲ್ಲಾಧಿಕಾರಿಗಳಾದ ಅನುರಾಧ ಜಿ., ಪಶುಪಾಲನಾ ಇಲಾಖೆಯ ಉಪ ನಿರ್ದೇಶಕರಾದ ಡಾ.ಪೋಮ್ ಸಿಂಗ್, ತೋಟಗಾರಿಕಾ ಇಲಾಖೆಯ ಉಪ ನಿರ್ದೇಶಕರಾದ ಚಿದಾನಂದ ಪೂಜಾರಿ, ನಗರ ನೀರು ಸರಬರಾಜು ಮತ್ತು ಕೊಳಚೆ ಮಂಡಳಿ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಮಲ್ಲಿಕಾರ್ಜುನ ಪಾಟೀಲ ಹಾಗೂ ಕಂದಾಯ ಇಲಾಖೆಯ ಇನ್ನಿತರ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.

# ಮತಗಟ್ಟೆಗಳಲ್ಲಿ ಅಗತ್ಯ ಸಿದ್ಧತೆ ಖಾತ್ರಿಪಡಿಸಿಕೊಳ್ಳಿ

### ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಸೂಚನೆ

■ **ಹಂಪಿ ಟೈಮ್ಸ್ ಬಳ್ಳಾರಿ**

ರಾಜ್ಯದ ಎರಡನೇ ಹಂತದ ಲೋಕಸಭೆ ಚುನಾವಣೆಗೆ ಮೇ 07 ರಂದು ಮತದಾನ ನಡೆಯಲಿದ್ದು, ಮತಗಟ್ಟೆಗಳಲ್ಲಿನ ಅಗತ್ಯ ಸಿದ್ಧತೆ ಖಾತ್ರಿ ಪಡಿಸಿಕೊಳ್ಳಬೇಕು. ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದು ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಅವರು ಎಲ್ಲಾ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಸೂಚಿಸಿದರು.

ಅವರು, ರಾಜ್ಯದ ಎರಡನೇ ಹಂತದ ಲೋಕಸಭೆ ಚುನಾವಣೆಯ ಪೂರ್ವ ಸಿದ್ಧತೆಯ ಕುರಿತು ಬುಧವಾರದಂದು ಎಲ್ಲಾ ಜಿಲ್ಲಾ ಚುನಾವಣಾಧಿಕಾರಿ, ಜಿಲ್ಲಾ ಸ್ವೀಪ್ ನೋಡೆಲ್ ಅಧಿಕಾರಿ ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ವಿಡಿಯೋ ಸಂವಾದ ಸಭೆ ನಡೆಸಿ ಮಾತನಾಡಿದರು.

ಆಯಾ ಜಿಲ್ಲೆಯ ಎಲ್ಲ ಮತಗಟ್ಟೆಗಳಿಗೂ ಸ್ಥಳೀಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರಿನ ವ್ಯವಸ್ಥೆ, ಶ್ಯಾಮಿಯಾನ ವ್ಯವಸ್ಥೆ, ರ್‍ಯಾಂಪ್, ವೀಲ್‌ಚೇರ್ ಹಾಗೂ ಇತರೆ ಅಗತ್ಯ ವ್ಯವಸ್ಥೆಗಳ ಸಿದ್ಧತೆ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು. ರಾಜ್ಯದಲ್ಲಿ ಬಿಸಿಲಿನ ತಾಪಮಾನದ ಶಾಖಾಘಾತವಿದ್ದು, ಆಂಬುಲೆನ್ಸ್ ಸೇವೆ ಒದಗಿಸಬೇಕು ಎಂದು ತಿಳಿಸಿದರು.

ಮಸ್ಟರಿಂಗ್, ಡಿಮಸ್ಟರಿಂಗ್ ಮತ್ತು ಇನ್ನಿತರೆ ಚುನಾವಣೆ ಸಂಬಂಧಿತ ತರಬೇತಿ ಕಾರ್ಯಾಗಾರ ಪೂರ್ಣಗೊಳಿಸಬೇಕು. ಅಭ್ಯರ್ಥಿಗಳ ಸಮ್ಮುಖದಲ್ಲಿ ಕೊನೆಹಂತದ ಮತಯಂತ್ರಗಳ ರ್‍ಯಾಂಡಮೈಜೇಶನ್ ಕಾರ್ಯ ನಡೆಸಬೇಕು ಎಂದು ತಿಳಿಸಿದರು.

ಮೇ 07 ರಂದು ಮತದಾನ ದಿನವಾಗಿದ್ದು, ಪ್ರಜಾಪ್ರತಿನಿಧಿ ಕಾಯ್ದೆಯ ಪ್ರಕಾರ ಮತದಾನಕ್ಕೆ ನಿಗದಿಪಡಿಸಿದ ಅವಧಿ ಕೊನೆಗೊಳ್ಳುವುದಕ್ಕಿಂತ 48 ಗಂಟೆಗಳ ಮುಂಚೆ ಕೆಲವು ವಿಶೇಷ ನಿಯಮಾವಳಿಗಳು ಜಾರಿಯಲ್ಲಿರುತ್ತವೆ. >>4

# ಯುವ ಮತದಾರರ ಧ್ವನಿ

### ಮತದಾನ ನಮ್ಮ ಭವಿಷ್ಯದ ದಿಕ್ಸೂಚಿ



ಮತದಾನ ನಮ್ಮ ಭವಿಷ್ಯದ ದಿಕ್ಸೂಚಿ ಎನಿಸುವುದು, ಸೂಕ್ತ ವ್ಯಕ್ತಿಗೆ ಮತದಾನ ಮಾಡುವ ಸುವರ್ಣಾವಕಾಶ ಬಂದೊದಗಿದೆ. ನಾವು miss ಮಾಡಿಕೊಳ್ಳಬಾರದು. ನಾನು ನನ್ನ ಮತದಾನದ ಹಕ್ಕನ್ನು ಚಲಾಯಿಸುವೆ.

– ಎಸ್. ಆರ್. ಸಾಗರ. (ವಿದ್ಯಾರ್ಥಿ)
ನ್ಯಾಷನಲ್ ಪಿಯು ಕಾಲೇಜ್. ಹೊಸಪೇಟೆ.

**ಯುವ ಮತದಾರರು ಮತದಾನದ ಅಭಿಪ್ರಾಯಗಳನ್ನು ಕಳಿಸಿ**
**94486 33038**
**Email: hampitimes@gmail.com**

# ಚುನಾವಣಾ ಕಾರ್ಯ ನಿರಾಕರಣೆ ಇಬ್ಬರು ಶಿಕ್ಷಕಿಯರು ಅಮಾನತು

### ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಆದೇಶ

■ **ಹಂಪಿ ಟೈಮ್ಸ್ ಹೊಸಪೇಟೆ**

ಲೋಕಸಭಾ ಚುನಾವಣಾ ಕಾರ್ಯಕ್ಕೆ ನಿರಾಕರಣೆ ಮತ್ತು ಬೇಜವಾಬ್ದಾರಿ ತೋರಿದ ಮೇರೆಗೆ ಇಬ್ಬರು ಶಿಕ್ಷಕಿಯರನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಅಮಾನತುಗೊಳಿಸಿ ಜಿಲ್ಲಾ ಚುನಾವಣಾಧಿಕಾರಿ ಎಂ.ಎಸ್. ದಿವಾಕರ ಸೇವೆಯಿಂದ ಆದೇಶ ಹೊರಡಿಸಿದ್ದಾರೆ.

ಕೂಡ್ಲಿಗಿ ಕ್ಷೇತ್ರದ ಗುಡೆಕೋಟೆ ಹೋಬಳಿಯ ಮತಗಟ್ಟೆ ಸಂಖ್ಯೆ 119 ಕ್ಕೆ ಬಿಎಲ್‌ಒ ಆಗಿ ನಿಯೋಜನೆಗೊಂಡಿದ್ದ ವಡ್ಡರಹಟ್ಟಿ ಸಿದ್ದಾಪುರ ಸ.ಹಿ.ಪ್ರಾ.ಶಾಲೆ ಶಿಕ್ಷಕಿ ಸುನಂದ ನ್ಯಾಮತಿ ಮತ್ತು ಮತಗಟ್ಟೆ ಸಂಖ್ಯೆ 120ಕ್ಕೆ ಬಿಎಲ್‌ಒ ಆಗಿ ನಿಯೋಜನೆಗೊಂಡಿದ್ದ ಕೂಡ್ಲಿಗಿ ತಾಲೂಕಿನ ಗುಂಡಮುಣಗು ಸ.ಮಾ.ಹಿ.ಪ್ರಾ.ಶಾಲೆಯ ಸಹ ಶಿಕ್ಷಕಿ ಮಮತಾ ಇವರನ್ನು ಅಮಾನತ್ತುಗೊಳಿಸಿ, ಇಲಾಖೆ ವಿಚಾರಣೆಯನ್ನು ಕಾಯ್ದಿರಿಸಲಾಗಿದ್ದು, ಅನುಮತಿ ಪಡೆಯದೇ ಕೇಂದ್ರ ಸ್ಥಾನ ತೊರೆಯುವಂತಿಲ್ಲ ಎಂದು ಜಿಲ್ಲಾ ಚುನಾವಣಾಧಿಕಾರಿ ಆದೇಶದಲ್ಲಿ ತಿಳಿಸಿದ್ದಾರೆ.

# ಚುನಾವಣಾ ಜಾಹೀರಾತುಗಳಿಗೆ ಪೂರ್ವಾನುಮತಿ ಕಡ್ಡಾಯ

■ ಹಂಪಿ ಟೈಮ್ಸ್ ಹೊಸಪೇಟೆ

ಲೋಕಸಭಾ ಚುನಾವಣೆಯ ಮತದಾನವು ಮೇ 7ರಂದು ನಡೆಯಲಿದೆ. ಮೇ 6 ಮತ್ತು ಮೇ 7ರಂದು ಅಭ್ಯರ್ಥಿಗಳು, ಸಂಸ್ಥೆಗಳು ಅಥವಾ ಯಾವುದೇ ವ್ಯಕ್ತಿಯು ದಿನಪತ್ರಿಕೆಗಳಲ್ಲಿ ಯಾವುದೇ ರೀತಿಯ ಚುನಾವಣಾ ಜಾಹೀರಾತು ಪ್ರಕಟಿಸಬೇಕಾದರೆ ಸದರಿ ಜಾಹೀರಾತಿಗೆ ಜಿಲ್ಲಾಮಟ್ಟದ ಮಾಧ್ಯಮ ಪ್ರಮಾಣೀಕರಣ ಹಾಗೂ ಮೇಲುಸ್ತುವಾರಿ ಸಮಿತಿ (ಎಂಸಿಎಂಸಿ) ಕಡೆಯಿಂದ ಪೂರ್ವಾನುಮತಿ ಪಡೆಯವುದು ಕಡ್ಡಾಯವಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದ್ದಾರೆ.



ಚುನಾವಣಾ ಜಾಹೀರಾತು ಪ್ರಕಟಿಸಲು ಬಯಸುವ ಅಭ್ಯರ್ಥಿಗಳು ಸದರಿ ಜಾಹೀರಾತಿನ ಎರಡು ಸ್ವಯಂ ದೃಢೀಕೃತ ಪ್ರತಿಗಳೊಂದಿಗೆ ನಿಗದಿತ ಅರ್ಜಿ ನಮೂನೆಯಲ್ಲಿ ಮೇ 4 ರೊಳಗೆ ಜಿಲ್ಲಾಮಟ್ಟದ ಎಂಸಿಎಂಸಿ ಗೆ ಅರ್ಜಿ ಸಲ್ಲಿಸಬೇಕು.

**ಪೂರ್ವಾನುಮತಿಗೆ ಅರ್ಜಿ ಲಭ್ಯ:** ಮೇ 6 ಮತ್ತು ಮೇ 7ರಂದು ಮುದ್ರಣ ಮಾಧ್ಯಮದಲ್ಲಿ ಪ್ರಕಟಿಸಲು ಅಗತ್ಯವಿರುವ ನಿಗದಿತ ನಮೂನೆಯ ಅರ್ಜಿ ನಮೂನೆಗಳು ಹಿರಿಯ ಸಹಾಯಕ ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ತಾಲೂಕು ಕಚೇರಿ ಆವರಣ, ಹೊಸಪೇಟೆ ವಿಜಯನಗರ ಜಿಲ್ಲೆ ಈ ಕಚೇರಿಯಿಂದಲು ಸಹ ಪಡೆಯಬಹುದಾಗಿದೆ. ಪೂರ್ವಾನುಮತಿ ಪಡೆಯದ ಅಭ್ಯರ್ಥಿಗಳ ಜಾಹೀರಾತುಗಳನ್ನು ಪ್ರಕಟಿಸಬಾರದು ಎಂದು ಚುನಾವಣಾ ಆಯೋಗವು ತಿಳಿಸಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.


**ಸುದ್ದಿ, ಜಾಹೀರಾತು ಕಚೇರಿ**

ವಿಜಯನಗರ ಜಿಲ್ಲೆಯ ಸಾರ್ವಜನಿಕ ಸುದ್ದಿ ಪ್ರಕಟಣೆಗಳ ಮಾಹಿತಿ ಪ್ರತಿಗಳನ್ನು ನೇರವಾಗಿ ಈ ಕೆಳಗಿನ ಕಚೇರಿ ವಿಳಾಸಕ್ಕೆ ತಲುಪಿಸಲು ಕೋರಿದೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
# ಬಂಬೂ ಬಜಾರ್, ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
94486 33038
Email: hampitimes@gmail.com

MASSEY FERGUSON TAFE
ವಿಜಯಶ್ರೀ ಮೋಟಾರ್ಸ್ (ಟ್ರ್ಯಾಕ್ಟರ್ ವಿಭಾಗ)



RRR GROUP
99801 27607
73533 06719

S.M.TRADERS & SERVICES
ATLAS COPCO
COMPRESSORS, HOSEPIPE, DRILL RODS,SPARE PARTS Etc.
Contact for Details
96866 63125
96866 63132
96864 13132
Hampi Road, Hosapete-583201

House For Sale



3 BHK independent Duplex House with Built Area 2300 sq.ft. in an extent of 1500 sq.ft. for Sale at Rajeev Nagar, 2nd Cross, Hospet (adjacent KSSIDC Industrial Estate)
94409 86570

ವಿವೇಕಶ್ರೇಯಾಲಾಪ
ಸಂಗೀತ ತರಬೇತಿ
VIVĒKASRĒYĀLĀPA
VEENA INSTRUMENTAL VOCAL - KARNATIC AND FILM MUSIC Classes
contact for more information
91082 26938
90368 65666
Near Honda Showroom, Hosapete-583201


ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

ಮಕ್ಕಳ ಜ್ಞಾನ ವಿಕಾಸಕ್ಕೆ ಮನೆಗೊಂದು ಕನ್ನಡ ದಿನಪತ್ರಿಕೆ ಇರಲಿ

# ರೈಲ್ವೆ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಮತದಾನ ಜಾಗೃತಿ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ, ನಗರಸಭೆ ಹಾಗೂ ತಾಲ್ಲೂಕು ಪಂಚಾಯತಿ ಸಂಯುಕ್ತಾಶ್ರಯದಲ್ಲಿ ಗುರುವಾರ ನಗರದ ರೈಲ್ವೆ ನಿಲ್ದಾಣದಲ್ಲಿ ಮತದಾನ ಜಾಗೃತಿ ನಡೆಯಿತು.

ವಿವಿಧ ಇಲಾಖೆಯ ಅಧಿಕಾರಿಗಳು ಬೆಳ್ಳಂಬೆಳಗ್ಗೆ ಹೊಸಪೇಟೆ ರೈಲು ನಿಲ್ದಾಣಕ್ಕೆ ತೆರಳಿ, ಹಂಪಿ ಎಕ್ಸಪ್ರೆಸ್ ಹಾಗೂ ಅಮರಾವತಿ ಎಕ್ಸಪ್ರೆಸ್ ರೈಲುಗಳು ರೈಲ್ವೆ ನಿಲ್ದಾಣಕ್ಕೆ ಆಗಮಿಸುತ್ತಿದ್ದಂತೆ ಪ್ರಯಾಣಿಕರಿಗೆ ಅಧಿಕಾರಿ ಮತ್ತು ಸಿಬ್ಬಂದಿಯವರು ಮತದಾನ ಜಾಗೃತಿಯ ಕರಪತ್ರಗಳನ್ನು ಹಂಚಿ ಜಾಗೃತಿ ಮೂಡಿಸಿದರು.

ಡೊಳ್ಳುಭಾರಿಸುವ ಮೂಲಕ ಜನರನ್ನು ಒಂದೆಡೆ ಸೇರಿಸಿ ಮತದಾನದ ಬಗ್ಗೆ ಜಾಗೃತಿ ಮೂಡಿಸಿದ್ದು ವಿಶೇಷವಾಗಿತ್ತು. ನಗರಸಭೆಯ ಪೌರಾಯುಕ್ತರಾದ ಚಂದ್ರಪ್ಪ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಚುನಾವಣೆಯ ಬಗ್ಗೆ ಯಾರು ಕೂಡ ಹಗುರವಾಗಿ ತೆಗೆದುಕೊಳ್ಳಬಾರದು. ಮತ ಹಕ್ಕಿನ ಮಹತ್ವ






ಅರಿಯಬೇಕು. ಮೇ 07ರಂದು ತಪ್ಪದೇ ಮತ ಚಲಾಯಿಸಬೇಕು ಎಂದು ಮನವಿ ಮಾಡಿದರು.

ಹೊಸಪೇಟೆ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಹರೀಶ್ ಮಾತನಾಡಿ, ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ವಿಜಯನಗರ ಜಿಲ್ಲೆಯ ಶೇಕಡಾವಾರು ಮತದಾನ ಪ್ರಮಾಣವು ಹೆಚ್ಚಳವಾಗಬೇಕು. ಈ ನಿಟ್ಟಿನಲ್ಲಿ ಮತದಾನ ಮಾಡುವುದು ಪ್ರತಿಯೊಬ್ಬರಿಗೂ ಪ್ರೇರೇಪಣೆ ಯಾಗಬೇಕು ಎಂದು ಸ್ವೀಪ್ ಕಾರ್ಯಕ್ರಮಗಳನ್ನು ರೂಪಿಸಿ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.

ವಿಜಯನಗರ ಜಿಲ್ಲೆಯ ಜಿಲ್ಲಾ ಪಂಚಾಯತ್‌ನ ಮುಖ್ಯ ಯೋಜನಾಧಿ ಕಾರಿ ಜೆ.ಎಂ. ಅನ್ನದಾನಸ್ವಾಮಿ ಮತದಾನದ ಪ್ರತಿಜ್ಞಾ ವಿಧಿ ಬೋಧಿಸಿ ಕಡ್ಡಾಯ ಮತದಾನ ಕುರಿತು ಜಾಗೃತಿ ಮೂಡಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್‌ನ ಯೋಜನಾ ಅಂದಾಜು ಮೌಲ್ಯಮಾಪನಾಧಿಕಾರಿ ಪತ್ರಿಬಸಪ್ಪ ಎನ್. ಕೆ., ಅಧೀಕ್ಷಕರಾದ ಲೋಕೇಶ್ ಬಾಬು, ಜಿಲ್ಲಾ ಐಇಸಿ ಫಾಜಿಲ್, ತಾಲೂಕು ಐಇಸಿ ನಾಗರಾಜ, ನಗರಸಭೆ ಅಭಿಯಂತರರಾದ ಆರತಿ, ನಗರಸಭೆ ಹಾಗೂ ಜಿಲ್ಲಾ ಪಂಚಾಯತ್‌ನ ಇನ್ನಿತರ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.

**ಆಟೋ ಚಾಲಕರಿಗೂ ಜಾಗೃತಿ:** ರೈಲ್ವೆ ನಿಲ್ದಾಣದಲ್ಲಿ ಹಮ್ಮಿಕೊಂಡಿದ್ದ ಮತದಾನ ಜಾಗೃತಿ ಸಂದರ್ಭದಲ್ಲಿ ಅಲ್ಲಿನ ಆಟೋ ಚಾಲಕರಿಗೂ ಸಹ ಮತದಾನದ ಕುರಿತು ತಿಳಿಸಲಾಯಿತು. ನನ್ನ ಮತ ನನ್ನ ಹಕ್ಕು ಎನ್ನುವಂತಹ ಫಲಕಗಳನ್ನು ಹಿಡಿದು ಆಟೋ ಚಾಲಕರು ಮತದಾನ ಜಾಗೃತಿಯ ಕಾರ್ಯಕ್ರಮದಲ್ಲಿ ಭಾಗಿಯಾದರು.

# ಮೇ 13 ರಂದು ಪಿಂಚಣಿ ಅದಾಲತ್, ಮೇ.10ರೊಳಗೆ ಕುಂದು ಕೊರತೆ ಸಲ್ಲಿಸಿ: ಸುಬ್ಬಯ್ಯ

■ **ಹಂಪಿ ಟೈಮ್ಸ್ ಬಳ್ಳಾರಿ**

ಕಾರ್ಮಿಕರ ಭವಿಷ್ಯ ನಿಧಿ ಪ್ರಾದೇಶಿಕ ಕಚೇರಿ ಬಳ್ಳಾರಿ ಇವರ ವತಿಯಿಂದ ಪಿಂಚಣಿದಾರರ ಕುಂದುಕೊರತೆಗಳನ್ನು ಆಲಿಸಿ ಪರಿಹಾರ ಒದಗಿಸಲು ಮೇ 13 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಬಳ್ಳಾರಿ ಪ್ರಾದೇಶಿಕ ಕಚೇರಿಯಲ್ಲಿ ಪಿಂಚಣಿ ಅದಾಲತ್ ಏರ್ಪಡಿಸಲಾಗಿದೆ.

ಬಳ್ಳಾರಿ, ಕೊಪ್ಪಳ, ವಿಜಯನಗರ ಮತ್ತು ಚಿತ್ರದುರ್ಗ ಜಿಲ್ಲೆಗಳ ಪಿಂಚಣಿದಾರರು ತಮ್ಮ ಕುಂದುಕೊರತೆಗಳಿದ್ದಲ್ಲಿ ಬಳ್ಳಾರಿಯ ಪ್ರಾದೇಶಿಕ ಕಚೇರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿ, ಇವರಿಗೆ ಪತ್ರ ಅಥವಾ ಇ-ಮೇಲ್ ಮೂಲಕ ತಮ್ಮ ಪಿ.ಪಿ.ಒ ಸಂಖ್ಯೆ ವಿಳಾಸ, ದೂರವಾಣಿ, ಮೊಬೈಲ್ ಸಂಖ್ಯೆ, ಕುಂದು ಕೊರತೆಯ ಸ್ವರೂಪ ಇತ್ಯಾದಿಗಳನ್ನು ಬರೆದು ಪತ್ರ ಮೂಲಕ ಮೇ 10 ರೊಳಗೆ ಕಳುಹಿಸಬಹುದು. ಪತ್ರ, ಲಕೋಟೆಯ ಮೇಲೆ ಪಿಂಚಣಿ ಅದಾಲತ್ ಎಂದು ಬರೆಯಬೇಕು.

ಹೆಚ್ಚಿನ ಮಾಹಿತಿಗಾಗಿ ದೂ.08392-268943 ಗೆ ಸಂಪರ್ಕಿಸಬಹುದು ಎಂದು ಕ್ಷೇತ್ರಿಯ ಭವಿಷ್ಯನಿಧಿ ಆಯುಕ್ತ ಕೆ.ವೆಂಕಟ ಸುಬ್ಬಯ್ಯ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬೆಳಕಿನ ಹಾದಿ

## ಸಾಮರ್ಥ್ಯ ಮತ್ತು ಸ್ಥಾನಮಾನ

■ **ಗುರು ಹಿರೇಮಠ**, ಹಗರಿಬೊಮ್ಮನಹಳ್ಳಿ

ಕೊಲಂಬಸ್ ಅಮೆರಿಕವನ್ನು ಪರಿಶೋಧಿಸುವುದಕ್ಕಿಂತ ಮೊದಲು ಬಹಳ ಸುದೀರ್ಘ ಮತ್ತು ಕಠಿಣತೆಯಿಂದ ಕೂಡಿದ ಸಮುದ್ರಯಾನದಲ್ಲಿ ಕ್ಯಾಪ್ಟನ್ ಆದ ತಾನು ತನ್ನ ನಾವಿಕನಿಗೆ (ಡಿಯಾಗೋ ) ಪರೋಕ್ಷವಾಗಿ ಆಜ್ಞೆ ಮಾಡುತ್ತಾನೆ. ಅದೇನೆಂದರೆ ಒಬ್ಬ ಉತ್ತಮ ನಾವಿಕನು ತನ್ನ ಸ್ಥಾನದ ಬಗ್ಗೆ ಅರಿವನ್ನು ಹೊಂದಿರುತ್ತಾನೆ. ಅಂದರೆ ಪರೋಕ್ಷವಾಗಿ ನೀನು ನಿನ್ನದೇ ಸ್ಥಾನದಲ್ಲಿ ಸರಿಯಾಗಿ ಕೆಲಸ ನಿರ್ವಹಿಸು ಎಂದರ್ಥ. ಅವರವರ ಸಾಮರ್ಥ್ಯಕ್ಕೆ ಅವರದೇ ಆದ ಸ್ಥಾನಮಾನಗಳು ಇರುತ್ತವೆ. ಅವರವರ ಸಮರ್ಥ್ಯಕ್ಕೆ ತಕ್ಕಂತೆ ಸ್ಥಾನಮಾನವಿಲ್ಲದಾಗ ಎಲ್ಲವೂ ನಿಷ್ಪ್ರಯೋಜಕವಾಗುವ ಸಾಧ್ಯತೆ ಇರುತ್ತದೆ. ಇದನ್ನು ಒಂದು ದೃಷ್ಟಾಂತದ ಮೂಲಕ ಹೇಳುವುದಾದರೆ



ಒಮ್ಮೆ ಒಂದು ತಾಯಿ ಒಂಟೆ ಮತ್ತು ಮರಿ ಒಂಟೆ ಎರಡೂ ಮಲಗಿದ್ದವು. ಇದ್ದಕ್ಕಿದ್ದಂತೆ ಮರಿ ಒಂಟೆ ಕೇಳಿತು, "ಅಮ್ಮಾ, ನಾನು ನಿನಗೆ ಕೆಲವು ಪ್ರಶ್ನೆಗಳನ್ನು ಕೇಳಬಹುದೇ? ಎಂದು, ಅದಕ್ಕೆ ತಾಯಿ ಒಂಟೆ ಹೇಳಿತು : "ಖಂಡಿತ! ಯಾಕೆ ಮಗು, ನಿನಗೆ ಏನಾದರೂ ತೊಂದರೆಯಾಗುತ್ತಿದೆಯೇ? ಎಂದು, ಅದಕ್ಕೆ ಮರಿ ಒಂಟೆ ಕೇಳಿತು,ಹಾಗೇನಿಲ್ಲ ಕೆಲವೊಂದಿಷ್ಟು ಸಂದೇಹಗಳು, ಅವೇನೆಂದರೆ "ಒಂಟೆಗಳಿಗೆ ಏಕೆ ಗೂನುಗಳಿವೆ?" ತಾಯಿ ಒಂಟೆ ಹೇಳಿತು "ಸರಿ ಮಗು, ನಾವು ಮರುಭೂಮಿಯ ಪ್ರಾಣಿಗಳು, ನಮಗೆ ನೀರು ಸಂಗ್ರಹಿಸಲು ಹಂಪ್ಸ್ ಬೇಕು ಮತ್ತು ನಾವು ನೀರಿಲ್ಲದೆ ಬದುಕುತ್ತೇವೆ ಎಂದು ತಿಳಿದಿದೆ". ಮರಿ ಒಂಟೆ ಕೇಳಿತು "ಸರಿ, ಹಾಗಾದರೆ ನಮ್ಮ ಕಾಲುಗಳು ಏಕೆ ಉದ್ದವಾಗಿವೆ ಮತ್ತು ಪಾದಗಳು ಏಕೆ ದುಂಡಾಗಿವೆ?" ತಾಯಿ ಹೇಳಿತು , "ಮಗುವೆ , ನಿಸ್ಸಂಶಯವಾಗಿ ನಾವು ಮರುಭೂಮಿಯಲ್ಲಿ ನಡೆಯಲು ಅತ್ಯಂತ ಸೂಕ್ತವಾಗಿ ಇವು ರಚಿಸಲ್ಪಟ್ಟಿವೆ. ಈ ಕಾಲುಗಳಿಂದಲೇ ನಾವು ಮರುಭೂಮಿಯನ್ನು ಬೇರೆಯವರಿಗಿಂತ ಉತ್ತಮವಾಗಿ ಸುತ್ತಬಲ್ಲೆವೆಂಬುದು ನಿನಗೆ ತಿಳಿದಿದಿಯೇ? ಮರಿ ಒಂಟೆ ಹೇಳಿತು , "ಸರಿ, ಹಾಗಾದರೆ ನಮ್ಮ ರೆಪ್ಪೆಗಳು ಏಕೆ ಉದ್ದವಾಗಿವೆ? ಕೆಲವೊಮ್ಮೆ ಇವು ನನ್ನ ದೃಷ್ಟಿಗೆ ತೊಂದರೆ ನೀಡುತ್ತವೆ . " ತಾಯಿ ಹೆಮ್ಮೆಯಿಂದ ಹೇಳಿತು, "ಮಗುವೇ ಆ ಉದ್ದನೆಯ ದಪ್ಪ ರೆಪ್ಪೆಗೂದಲುಗಳು ನಮ್ಮ ರಕ್ಷಣಾತ್ಮಕ ಹೊದಿಕೆಯಾಗಿವೆ . ಮರುಭೂಮಿಯ ಮರಳು ಮತ್ತು ಗಾಳಿಯಿಂದ ನಮ್ಮ ಕಣ್ಣುಗಳನ್ನು ರಕ್ಷಿಸಲು ಅವು ಸಹಾಯ ಮಾಡುತ್ತವೆ.

ಹೀಗೆ ತಾಯಿ ಒಂಟೆಯು ತನ್ನ ಮರಿ ಒಂಟೆಯ ಎಲ್ಲ ಸಂದೇಹಗಳಿಗೆ ಉತ್ತರಿಸಿದ ನಂತರ ಮರಿ ಒಂಟೆ ಆಳವಾಗಿ ಯೋಚಿಸಿ ಹೀಗೆ ಹೇಳಿತು " ನನಗೆ ಅರ್ಥವಾಯಿತು ನಾವು ಮರುಭೂಮಿಯಲ್ಲಿದ್ದಾಗ ನೀರನ್ನು ಸಂಗ್ರಹಿಸುವುದು ಈ ಗೂನು, ಕಾಲುಗಳು ಮರುಭೂಮಿಯಲ್ಲಿ ನಡೆಯಲು ಮತ್ತು ಈ ಕಣ್ಣಿನ ರೆಪ್ಪೆಗಳು ನನ್ನ ಕಣ್ಣುಗಳನ್ನು ಮರುಭೂಮಿಯ ಮರಳಿನಿಂದ ರಕ್ಷಿಸುತ್ತವೆ, ಆದರೆ ನಾವು ಇಲ್ಲಿ ಮೃಗಾಲಯದಲ್ಲಿ ದೇವರ ಹೆಸರಿನಲ್ಲಿ ಏನು ಮಾಡುತ್ತಿದ್ದೇವೆ?! " ನಾವು ಈಗಾಗಲೇ ಪಡೆದಿರುವ ಎಲ್ಲ ಬಗೆಯ ಸಾಮರ್ಥ್ಯಗಳ ಪ್ರಯೋಜನವಾದರೂ ಏನು? ಎಂಬುದೇ ಮರಿ ಒಂಟೆಗೆ ಯಕ್ಷಪ್ರಶ್ನೆಯಾಗಿ ಕಾಡುತ್ತದೆ. ನಾವು ಸರಿಯಾದ ಸ್ಥಳದಲ್ಲಿದ್ದರೆ ಮಾತ್ರ ಕೌಶಲ್ಯಗಳು, ಜ್ಞಾನ, ಸಾಮರ್ಥ್ಯಗಳು ಮತ್ತು ಅನುಭವಗಳು ಉಪಯುಕ್ತವಾಗುತ್ತವೆ.

# ಮತದಾನ ನಮ್ಮ ಹಕ್ಕು

ಮನುಷ್ಯನ ಬದುಕಿನಲ್ಲಿ ದಾನ ಮಾಡುವಂತ ದಿನ, ಸಮಯ, ಸನ್ನಿವೇಶ, ಸಂದರ್ಭಗಳು ಒಂದಲ್ಲ ಒಂದು ಬಾರಿ ಬರುತ್ತದೆ. ಇದರಿಂದ ಯಾರೂ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ದಾನ ಚಿಕ್ಕದಾಗಿರಬಹುದು ದೊಡ್ಡದಾಗಿರಬಹುದು. ಅಲ್ಲಿ ಒಳ್ಳೆಯ ಮನಸ್ಸು ಶ್ರೇಷ್ಠವಾದ ಭಾವನೆ ಮುಖ್ಯ. ದಾನವೆಂಬ ಪ್ರವೃತ್ತಿಯ ಪ್ರಕ್ರಿಯೆಯಲ್ಲಿ ಅನ್ನದಾನ, ರಕ್ತದಾನ,ನೇತ್ರದಾನ,ಸಂಪತ್ತಿನದಾನ,ಸ್ಥಳದಾನ ಮುಂತಾದವುಗಳನ್ನು ಹೆಸರಿಸಬಹುದು. ಇವೆಲ್ಲಾ ದಾನವನ್ನು ಅವರವರ ಯೋಗ್ಯತೆಯ ಆಧಾರದ ಮೇಲೆ ನಿರ್ಧರಿಸಬಹುದು.

ಅದೇರೀತಿ ಬಹುದೊಡ್ಡ ಪ್ರಜಾಪ್ರಭುತ್ವ ಹೊಂದಿದ ನಮ್ಮ ದೇಶದಲ್ಲಿ ಮತದಾನವೊಂದೆ ಎಲ್ಲರೂ ಸಮಾನ ರೀತಿಯಲ್ಲಿ ಮಾಡಬಹುದಾದ ಪ್ರಕ್ರಿಯೆಯಾಗಿದೆ. ಇಲ್ಲಿ ಮೇಲು-ಕೀಳು, ಜಾತಿ, ನೀತಿ, ನಿಯಮ, ಅಧಿಕಾರ, ಅಂತಸ್ತುಗಳ ತುಲನೆ ಇರುವುದಿಲ್ಲ. ನಮ್ಮ ಸಂವಿಧಾನದ ಪ್ರಕಾರ ದೇಶದಲ್ಲಿ ಯಾವ ವ್ಯಕ್ತಿಗೆ ಕೇವಲ 18 ವರ್ಷ ತುಂಬಿದೆಯೋ ಅವರೆಲ್ಲ ಸಮಾನ ರೀತಿಯಲ್ಲಿ ಮಾಡಬಹುದಾದ ದಾನವೆಂದರೆ ಮತದಾನ.

ಭಾರತವು ಹಲವಾರು ಧರ್ಮ, ಭಾಷೆ, ಸಂಸ್ಕೃತಿ, ಲಿಪಿ ಹೊಂದಿದ ಮಿನಿ ಪ್ರಪಂಚ. ಇಲ್ಲಿ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ, ರಾಜಕೀಯ ಸಮಾನತೆಗೆ ಸಾಧ್ಯವಿದೆ. ಇಲ್ಲಿ ನಮ್ಮ ಹಕ್ಕನ್ನು ನಿರ್ಭೀಡೆಯಿಂದ, ಆಸಕ್ತಿಯಿಂದ, ಶ್ರದ್ಧಾ-ಉತ್ಸಾಹದಿಂದ ಯಾವ ಅಳುಕಿಲ್ಲದೆ ಮತದಾನದ ಮಾಡಿ ಚುನಾವಣೆಗೆ ನಿಂತಿರುವಲ್ಲಿ ಒಳ್ಳೆಯ ಪ್ರತಿನಿಧಿಯೊಬ್ಬನನ್ನು ಆಯ್ಕೆಗೊಳಿಸುವ ಸ್ವಾತಂತ್ರ್ಯ ಪ್ರತಿಯೊಬ್ಬರಿಗೂ ಇದೆ.



ಡಾ. ರಾಜಶೇಖರ ಜಮದಂಡಿ,
ಲೇಖಕರು ಮೊ: 9448441471

Scan For Digital Colourful
HAMPI TIMES E-paper

ಮತದಾನದ ಸಂದರ್ಭ ದಲ್ಲಿ ಬೇರೊಬ್ಬರ ಬಗೆಗೆ ಸುಳ್ಳು ಹಾಗೂ ಅರೆಸತ್ಯದ ವಿಷಯಗಳನ್ನು ಹೇಳಬಾರದು ಮತ್ತು ಕೇಳಲೂಬಾರದು. ಇದರಿಂದ ಆ ವ್ಯಕ್ತಿಗೆ ವೃಥಾ ತೊಂದರೆಯಾಗುತ್ತದೆ. ಇತರರಿಗೆ ತಪ್ಪು ಸಂದೇಶ ಹೋಗಲೂ ಬಹುದು. ಮತ ದಾನ ಮಾಡುವಲ್ಲಿ ಪ್ರತಿಯೊಬ್ಬರೂ ಎಚ್ಚರಿಕೆ, ಬುದ್ಧಿವಂತಿಕೆ, ದೂರದೃಷ್ಟಿ ಮತ್ತು ವಿವೇಚನೆ ಬಹಳ ಅತ್ಯಗತ್ಯ. ಈ ನಾಲ್ಕರಲ್ಲಿ ಒಂದನ್ನು ಮರೆತು ಯೋಗ್ಯ ರಲ್ಲದವರಿಗೆ ಮತದಾನ ಮಾಡಿದರೆ ಒಳ್ಳೆಯ ವ್ಯಕ್ತಿ ಅಥವಾ ಒಳ್ಳೆಯ ಸರ್ಕಾರ ನಿರ್ಮಾಣ ಮಾಡಲು ಸಾಧ್ಯವಾಗುವುದಿಲ್ಲ. ಚುನಾವಣೆಯಲ್ಲಿ ಮತ ದಾನದ ಮೂಲಕ ಯೋಗ್ಯ ವ್ಯಕ್ತಿಯನ್ನು ಆಯ್ಕೆ ಮಾಡಿದಾಗ ಮಾತ್ರ ಆತನಿಂದ ಸ್ವಸ್ತ್ಯ




ಸಮಾಜ ನಿರ್ಮಾಣ ಮಾಡಲು ಸಾಧ್ಯ. ಜನರಿಂದ ಜನರಿಗಾಗಿ ಜನರಿಗೋಸ್ಕರ ಜನರಿಂದಲೇ ಅಸ್ತಿತ್ವಕ್ಕೆ ಬರುವ ಯಾವುದೇ ಸರ್ಕಾರವಾಗಿರಲಿ ಅದರಿಂದ ಉತ್ತಮ ಆಡಳಿತ ಅನುಕೂಲಗಳನ್ನು ನಿರೀಕ್ಷಿಸಬಹುದು. ಒಂದುವೇಳೆ ಯೋಗ್ಯರಲ್ಲದ ವ್ಯಕ್ತಿಗಳು ತೋರುವ ಅನೇಕ ಆಸೆ-ಆಮಿಷಗಳಿಗೆ ಬಲಿಯಾಗಿ ತನ್ನತನ ಮರೆತು ಮತದಾನ ಮಾಡಿದ್ದೇಯಾದರೆ ನಮ್ಮ ಕಾಲ ಮೇಲೆ ನಾವೆ ಕಲ್ಲುಗಳನ್ನು ಹಾಕಿಕೊಂಡಂತೆ. ಆದರೆ ಅನೇಕರು ಈ ರೀತಿ ಉದಾತ್ತ ಚಿಂತನೆ ಮಾಡುವುದೇ ಇಲ್ಲ. ಅಸಂಬದ್ಧ ಹಾಗೂ ಅಪ್ರಯೋಜಕ ವ್ಯಕ್ತಿಗಳನ್ನು ಆಯ್ಕೆ ಮಡುವುದರಿಂದ ಏನೆಲ್ಲಾ ಅನಾಹುತ ಸಂಭವಿಸಬಹುದಲ್ಲವೆ? ಇದು ನಿಜಕ್ಕೂ ನಾವು ಮಾಡುವ ದುರಂತವಲ್ಲವೆ!

ನಾನು ಮಾಡುತ್ತಿರುವುದೇನು? ನನ್ನ ಆಯ್ಕೆ ಯೋಗ್ಯರಿಗೆ ಸಲ್ಲುತ್ತಿದೆಯಾ? ನನ್ನ ಮತದಾನ ಸದ್ವಿನಿಯೋಗ ಆಗುತ್ತಿದೆಯಾ? ನನ್ನ ಮತದಾನದ ಹಕ್ಕನ್ನು ಒಳ್ಳೆಯ ತತ್ವ ಸಿದ್ಧಾಂತಕ್ಕೆ ಅನುಗುಣವಾದ ವ್ಯಕ್ತಿಗೆ ಚಲಾಯಿಸುತ್ತಿದ್ದೇನಾ? ಈ ರೀತಿ ಹತ್ತಾರು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕು. ಈ ಉತ್ತರ ಪ್ರಮಾಣಿಕವಾಗಿರಬೇಕು ಮತ್ತು ಅದು ನಮ್ಮ ಪ್ರಜಾಪ್ರಭುತ್ವವನ್ನು ಹಸನುಗೊಳಿಸುವಲ್ಲಿ ಸಹಕಾರಿಯಾಗಿರಬೇಕು.

ನಾವು ಮಾಡುವ ಒಂದು ಮತದಾನದಿಂದ ಏನು ತಾನೆ ಪ್ರಯೋಜನವಾದೀತು? ಎಂದು ನಕರಾತ್ಮವಾಗಿ ಆಲೋಚಿಸಬಾರದು. ಆನೆಯ ಬಾಯಿಯಿಂದ ಬಿದ್ದ ಒಂದು ಕಾಳು ಅದಕ್ಕೆ ಚಿಕ್ಕದಾಗಿರಬಹುದು. ಆದರೆ ಅದೇ ಒಂದು ಕಾಳು ಇರುವೆಗೆ ಒಂದೆರೆಡು ದಿನ ಆಹಾರವಾಗಬಹುದು. ಹಾಗೆಯೇ ನಮ್ಮ ಒಂದು ಮತ ನಮಗೆ ಏನೂ ಅನ್ನಿಸದಿರಬಹುದು. ಅದೇ ಒಂದೊಂದು ಮತವೂ ಚುನಾವಣೆಗೆ ನಿಂತ ವ್ಯಕ್ತಿಯ ಗೆಲುವಿಗೆ ಸಹಕಾರಿಯಾದೀತು. ಹಾಗಾಗಿ ಸ್ವಲ್ಪ ಯೋಚನೆಯಿಂದ ಮತದಾನ ಮಾಡಿ ಸುಭದ್ರ ವ್ಯಕ್ತಿ ಮತ್ತು ಸರ್ಕಾರದ ರಚನೆಗೆ ನಾವೆಲ್ಲಾ ಕಾರಣರಾಗೋಣ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ. **ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 9448633038

**ಜಾಹೀರಾತಿಗಾಗಿ ಸಂಪರ್ಕಿಸಿ:**
**Contact for**
**EVENT COVERAGE**
**& Advertisements**
**in Leading**
**Hampi Times**
**Daily News Paper**
**M: 94486 33038**

# ಬೇಸಿಗೆ ರಜಾ ಮಕ್ಕಳಿಗೆ.... ಸಜೆಯಾಗದೆ ಮಜಾ....ತರಲಿ

ಆತ್ಮೀಯ ಪಾಲಕರೇ ಮತ್ತು ಪೋಷಕರೇ ಹಿಂದೆಲ್ಲಾ ನಾವು ನೀವು ಬಾಲ್ಯದಲ್ಲಿ ಓದುವಾಗ ರಜೆ ಬಿಟ್ಟ ತಕ್ಷಣ ಅಜ್ಜಿ ಮನೆಗೆ ಹೋಗುತಿದ್ದೆವು ನಮ್ಮಂತೆ ಚಿಕ್ಕಮ್ಮ ದೊಡ್ಡಮ್ಮನ ಮಕ್ಕಳೂ ಕೂಡ ಬರುತ್ತಿದ್ದರು ಎಲ್ಲರೂ ಕೂಡಿ ಉಪ್ಪಿನ ಮೂಟೆಯ ಆಟ, ಕಣ್ಣಾ ಮುಚ್ಚಾಲೆ,ಮೂಲೆ ಹಿಡಿಯುವುದು, ಕುಂಟೆಬಿಲ್ಲೆ ಮರಕೋತಿ ಆಟ ,ಅಳಿಗುಣಿ ಮನೆ ಆಟ, ಕೇರಂ ಆಟ ಅಲ್ಲದೆ ಗೊಂಬೆ ಆಟ ಈ ರೀತಿ ಅನೇಕ ರೀತಿ ಆಟಗಳನ್ನು ಆಡುತ್ತಿದ್ದಿದ್ದು ನಮಗೆ ನೆನಪಿದೆ ಅಲ್ಲವೇ ಜೊತೆಗೆ ಅಜ್ಜಿ ಮನೆಗೆ ಹೋದಾಗ ಅಜ್ಜಿ ಮಾಡುತ್ತಿದ್ದ ರುಚಿ ರುಚಿ ಕಜ್ಜಾಯ ಚಕ್ಕುಲಿ ನಿಪ್ಪಟ್ಟು ಕಾಳಿನ ಉಪ್ಪಿಟ್ಟು ಹೋಳಿಗೆ ಆಹಾ...ಕಾಫಿ ಕುಡಿಯುವಾಗ... ಸೊರ್... ಎನ್ನುವ ಶಬ್ದ ಲೋಟವನ್ನು ಕುಟ್ಟುವುದು ಊಟಕ್ಕೆ ಕುಳಿತಾಗ ತಟ್ಟೆ ಬಡಿಯುವುದು ಇನ್ನು ಬೇಕೆಂದರೆ ಮತ್ತೆ ಕುಟ್ಟುವುದು. ಅಜ್ಜಿ ದೊಡ್ಡಮ್ಮ ಚಿಕ್ಕಮ್ಮ ಸೇರಿ ಸಂಡಿಗೆ ಇಡುವಾಗ ಸಂಡಿಗೆ ಗಂಜಿಯನ್ನು ಲೋಟಕ್ಕೆ ಹಾಕಿಕೊಂಡು ಕುಡಿಯುವುದು ಅಪ್ಪಳ ಮಾಡುವಾಗ ಲಟ್ಟಣಿಗೆ ತಲೆಗೆ ಕುಟ್ಟಿಸಿ ಕೊಂಡಿರುವುದು ಇವೆಲ್ಲಾ ಮರೆಯದ ನೆನಪುಗಳು. ಮತ್ತೆ ಯಾರಿಗೂ ಹೇಳದೆ ಹುಣಸೆ ಮರ ಹತ್ತುವುದು ಮಾವಿನ ತೋಟಕ್ಕೆ ಹೋಗಿ ಹಣ್ಣು ಕಿತ್ತು ತಂದು ತೋಟದ ಮಾಲೀಕರು ಬಂದು ಅಪ್ಪ ಅಮ್ಮರಿಗೆ ಹೇಳಿ ನಮಗೆ ಹೊಡೆಸಿದ್ದು ನಂತರ ಆ ಕೆಡೆ ಕಾಲಿಟ್ಟರೆ ಅಪ್ಪ ಕಾಲು ಮುರಿಯುತ್ತೀನಿ ಎಂದು ಬೆದರಿಕೆ ಹಾಕಿದ್ದು ಇವೆಲ್ಲಾ ಮರೆಯದ ದಿನಗಳು. ಆಗೆಲ್ಲಾ ಹಳ್ಳಿಗಳಲ್ಲಿ ನಾಟಕ ಆಡಿಸುತ್ತಿದ್ದರು ಅದರಲ್ಲಿ ನಮಗೂ ಒಂದು ಸಣ್ಣ ಪಾತ್ರಅಚ್ಚುಕಟ್ಟಾಗಿ ಮಾಡಿದ್ದಕ್ಕೆ ನಮ್ಮ ಸಂಬಧಿಕರು ತಮಗೆ ತಿಳಿದಷ್ಟು ನೋಟಿಗೆ ಪಿನ್ನುಹಾಕಿ ನಮ್ಮ ನಾಟಕದ ಅಭಿನಯದ ಸಮಯದಲ್ಲಿ ಬಂದು ನಮ್ಮ ಡ್ರೆಸ್ ಗೆ ಹಾಕುತ್ತಿದ್ದರು ಈ ರೀತಿ ಮಾಡುವುದು ನಮ್ಮನ್ನು ಪ್ರೋತ್ಸಾಹಿಸಿದಂತಾಗುತ್ತಿತ್ತು ಅಷ್ಟೇ ಅಲ್ಲ ನಮ್ಮ ಪುಟ್ಟ ತಮ್ಮನನ್ನು ಹೆಗಲಮೇಲೆ ಎತ್ತಿಕೊಂಡು ಜಾತ್ರೆಗೆ ಹೋಗುವುದು ಬಹಳ ವಿಶೇಷವಾಗಿತ್ತು. ಆಗಿನ ಕಾಲದಲ್ಲಿ ಹಳ್ಳಿಗಳಲ್ಲಿ ನೀರಿನ ಸಮಸ್ಯೆ ಇದ್ದರಿಂದ ಬಾವಿಯಲ್ಲಿ ನೀರು ಸೇದ ಬೇಕಾಗಿತ್ತು. ಒಂದು ಸಲ ನಮ್ಮ ಆಂಟಿಯ ಮಗ ನೀರು ಸೇದಲು ಹೋಗಿ ಬಾವಿಗೆ ಕೊಡವನ್ನು ಹಾಕಿ ಬಂದಿದ್ದ ಅದನ್ನು ತೆಗೆಸಲು ಹರಸಹಾಸ ಮಾಡಬೇಕಾಗಿತ್ತು, ಅದನ್ನು ನೋಡಲು ನಾವು ಬಾವಿ ಸುತ್ತಲು ಕುಳಿತುಬಿಟ್ಟಿದ್ದೆವು ಅಲ್ಲಿದ್ದ ಹಿರಿಯರು ಇನ್ನು ಮುಂದೆ ಮಕ್ಕಳು ಯಾರೂ ಬಾವಿ ಕಡೆ ಬರುಕೂಡದು ಎಂದು ಹೇಳಿ ಕೊಡ ತೆಗೆಸಿದರು.

ನಾವುರಜೆಗೆ ಎಲ್ಲಾ ಮಕ್ಕಳು ಒಂದೆಡೆ ಸೇರಿ ಒಂದಿನ ಮಗುವಿನ ನಾಮಕರಣ. ಒಂದಿನ ಜೋಕಾಲಿ ಆಟ ಒಂದಿನ ಮದುವೆ ಆಟ ಒಂದಿನ ಅಡುಗೆ ಆಟ ಸಣ್ಣ ಸಣ್ಣ ಕುಡುಕೆ ತಂದು ಅನ್ನ ಸಾರು ಮಾಡಿ ಚಿಕ್ಕ ಚಿಕ್ಕ ಎಲೆಯ ಮೇಲೆ ಅನ್ನ ಸಾಂಬಾರ್ ಹಾಕಿಕೊಂಡು ಊಟ ಮಾಡುವುದು ಪ್ರತಿಯೊಂಬ್ಬರ ಮನೆಯಿಂದ ಏನಾದರೂ ತಿಂಡಿ ತರಬೇಕಿತ್ತು..... ಅಪರೂಪಕ್ಕೆ ಗೊಂಬೆಗಳು ಎಂದರೆ ಅವು



ಕಟ್ಟಿಗೆ ಗೊಂಬೆಗಳನ್ನು ತಂದು ನಮ್ಮ ಮಕ್ಕಳು ಎಂದು ಜೋಕಾಲಿ ಕಟ್ಟಿ. ಆಡುತ್ತಿದ್ದೆವು ರಾತ್ರಿ ಅಂಗಳದಲ್ಲಿ ಎಲ್ಲರೂ ಚಾಪೆ ಮೇಲೆ ಮಲಗಿ ಆಕಾಶದ ನಕ್ಷತ್ರಗಳನ್ನು ಎಣಿಸುವುದು ಬಹಳ ಖುಷಿಕೊಡುತ್ತಿತ್ತು ಏಕೆಂದರೆ ಎಣಿಕೆ ಮಾಡಿ ಮಾಡಿ ಹಾಗೆ ಬಾಯಿ ತೆರೆದುಕೊಂಡು ನಿದ್ದೆಗೆ ಜಾರಿದವರ ಬಾಯಿಗೆ ಕಡ್ಡಿ ಇಟ್ಟು ಎಬ್ಬಿಸಿ ನಮಗೆ ಏನೂ ಗೊತ್ತಿಲ್ಲದಂತೆ ಮಲಗುತ್ತಿದ್ದು ಅವರು ಅಳುವಾಗ ಸುಮ್ಮನಿರು ಈ ರೀತಿ ಯಾರಾದ್ರೂ ಮಾಡಿದರೆ ಪೂಜೆ ಮಾಡೋಣ ಎಂದು ಸಮಾಧಾನ ಪಡಿಸುತ್ತಿದ್ದೆವು. ಅಷ್ಟೇ ಅಲ್ಲ ರಾತ್ರಿ ಹೊತ್ತು ಯಾರ್ಗಾದ್ರು ನಿದ್ದೆ ಬರದೆ ಹೋದರೆ ತಲೆ ಮೇಲೆ ಕಂಬಳಿ ಸುತ್ಕೊಂಡು ಬೂತ ದೆವ್ವ ಬಂತು ಎಂದು ಎದುರಿಸಿದ್ದು ನೆನಪಿದೆ.

ರಜೆ ಮುಗಿದ ಎಲ್ಲರೂ ಅವರವರ ಊರಿಗೆ ಹೋಗುವಾಗ ಎಲ್ಲಾ ಮಕ್ಕಳಿಗೆ ಬಟ್ಟೆ ಕೊಡಿಸುತ್ತಿದ್ದರು ಬಸ್ ಹತ್ತಿದ್ದಾಗ ಕಿಟಕಿಯೇ ಬೇಕೆಂದು ಓಡಿ ಸೀಟ್ ಹಿಡಿಯುವುದು ಮಜಾವೊ ಮಜಾ.... ಇಂತಹ ಮಜಾ ಈಗಿನ ಪಟ್ಟಣದ ಕೆಲ ಮಕ್ಕಳಿಗೆ ಇಲ್ಲ ಏಕೆಂದರೆ ಪಾಲಕರು ಕೆಲಸದ ನಿಮಿತ್ತ ಪಟ್ಟಣಕ್ಕೆ ಬಂದು ಸೇರಿರುತ್ತಾರೆ ಅವರಿಗೆ ರಜೆ ಇರೋಲ್ಲ ಹೋಗಿ ಅಜ್ಜಿ ಮನೆಗೆ ಬಿಟ್ಟುಬರಲು ಅವರಿಗೆ ಹಳ್ಳಿ ವಾತಾವರಣ ಬಿಟ್ಟು ಪಟ್ಟಣಕ್ಕೆ ಹೊಂದಿಕೊಂಡಿರುವುದರಿಂದ ಕೆಲ ಪಾಲಕರೇ ತಮ್ಮ ಊರುಗಳಿಗೆ ಹೋಗಲು ಇಷ್ಟ ಪಡದೆ ಮಕ್ಕಳನ್ನು ಕೂಡ ರಜೆಗೆ ಹಳ್ಳಿಗೆ ಕಳಿಸುವುದಿಲ್ಲ ಬದಲಾಗಿ ಅವರನ್ನು ಸಮ್ಮರ್ ಕ್ಯಾಂಪುಗಳಲ್ಲಿ ಅಥವಾ ಖಿಗಿ ನೋಡುವಂತೆ ಹೇಳುವುದು ವಿಡಿಯೋ ಗೇಮ್ ಗಳನ್ನು ಕಲಿಸುವುದು ಮೊಬೈಲ್ ಗಳನ್ನು ಕೊಟ್ಟು ದಿನವಿಡೀ ಒಂದೇ ಕಡೆ ಕುಂತಲ್ಲಿ ಕೂತು ಮಕ್ಕಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಅನಾರೋಗ್ಯಕ್ಕೆ ತುತ್ತಾಗುತ್ತಿರುತ್ತಾರೆ.ಪೋಷಕರು ದಿನನಿತ್ಯ ಆಸ್ಪತ್ರೆಗೆ ಹೋಗಿ ನಮ್ಮ ಮಗು ಎಲ್ಲರಂತೆ ಆಡುತ್ತಿಲ್ಲ ಮಾತನಾಡುತ್ತಿಲ್ಲ ಓದುತ್ತಿಲ್ಲ ಹೀಗೆ ಹೇಳುತ್ತಾರೆ. ಬದಲಾಗಿ ಮಕ್ಕಳನ್ನು ಮಕ್ಕಳಂತೆ ಕಾಣಿರಿ ಣತ ಟಿಂಭುಟಜ ಬಿಡಿಸಲು ಬೆಳಿಗ್ಗೆ ಸಂಜೆ ಹೊರಗೆ ಸುತ್ತಾಡಿಸಿಕೊಂಡು ಬನ್ನಿ ಬೇರೆ ಮಕ್ಕಳೊಂದಿಗೆ ಆಡಲು ಬಿಡಿ ಇಲ್ಲಿ ನಮ್ಮ ಪ್ರತಿಷ್ಠೆಗಳನ್ನು ಪಕ್ಕಕ್ಕೆ ಸರಿಸಿ ಮಕ್ಕಳಿಗೆ ಹಾಸಿಗೆಯಿಂದ ಏಳುವಾಗಲೇ ಮೊಬೈಲ್ ಕೊಡುವುದು ಅಥವಾ ಣತ ಹಾಕುವುದು ಮಾಡಿದರೆ ಅಂತಹ ಮಕ್ಕಳ ಮಾನಸಿಕ ಮತ್ತು ದೈಹಿಕ ವಿಕಾಸ ಹೊಂದುವುದು ಹೇಗೆ ಇಂತಹ ಮಕ್ಕಳನ್ನು ಕಾಡುವ ಚಟಗಳಿಂದ ದೂರವಿಡಲು ಣತ ಟಿಂಭುಟಜ ಗಳನ್ನು ಬಿಟ್ಟು ಮೊದಲು ನಾವು ನೀವುಗಳು ನಮ್ಮ ಪೂರ್ವಿಕರೊಂದಿಗೆ ಉತ್ತಮ ಭಾಂದವ್ಯ ಬೆಳೆಸಿಕೊಂಡು ನಿಮ್ಮ ಮಕ್ಕಳೊಂದಿಗೆ ಹಳ್ಳಿಗಳಿಗೆ ಹೋಗಿ ಅಲ್ಲಿನ ಕೆರೆ ಬಾವಿ ಬೆಟ್ಟ ಗುಡ್ಡ ತೋಪು ಹೊಲ ತೋಟ ತೋರಿಸಿ ರೈತರ ಶ್ರಮ ತಿಳಿಸಿ ರೈತರೇ ನಮಗೆ ಅನ್ನಕೊಡುವವರು ಎಂದು ಮನದಟ್ಟು ಮಾಡಿಸಿ ಆಗ ಮಕ್ಕಳಿಗೂ ಹೊಸ ಹೊಸ ವಿಷಯವನ್ನು ನೋಡಿ ತಿಳಿದು ಖುಷಿಪಡುತ್ತಾರೆ

ಅಜ್ಜಿ ಅಜ್ಜರೂ ಕೂಡ ಮಕ್ಕಳ ತಪ್ಪನ್ನು ತಿದ್ದುತ್ತಾರೆ ಎಲ್ಲರೊಂದಿಗೆ ಬೆರೆತರೆ ಸರಿ ತಪ್ಪುಗಳು ತಿಳಿಯಲು ಅವಕಾಶ ಕಲ್ಪಿಸಿ ಮಕ್ಕಳಿಗೆ ಅಜ್ಜಿ ತಾತ ದೊಡ್ಡಮ್ಮ ದೊಡ್ಡಪ್ಪ ಚಿಕ್ಕಮ್ಮ ಚಿಕ್ಕಪ್ಪ ಅತ್ತೆ ಮಾವ ಮುಂತಾದ ಬಾಂಧವ್ಯಗಳು ತಿಳಿಯಲು ಸಹಕರಿಸಿ ಮಕ್ಕಳನ್ನು ರಜೆಯಲ್ಲಿ ಎಲ್ಲೂ ಹೋಗದಂತೆ ಮಾಡುವುದರಿಂದ ಮಕ್ಕಳ ಬಾಲ್ಯವನ್ನು ನಾವು ಕಿತ್ತುಕೊಂಡಂತಾಗುತ್ತದೆ. ಆದ್ದರಿಂದ ಆತ್ಮೀಯ ಪಾಲಕರೇ ರಜೆ ಸಮಯದಲ್ಲಿ ಕುಟುಂಬದೊಡನೆ ನೀವು ಬೆರೆಯಿರಿ ಮಕ್ಕಳನ್ನು ಕರೆದುಕೊಂಡು ಹೋಗಿ ದುಡಿಮೆಗಾಗಿ ಸಮಯ ಕಾದಿರಿಸಿ ನಿಮ್ಮ ಸಿಟ್ಟು ಬೇಸರ ಏನೇ ಇರಲಿ ಅದೆಲ್ಲವನ್ನು ಪಕ್ಕಕ್ಕೆ ಇಟ್ಟು ನೀವು ನಿಮ್ಮವರೊಡನೆ ಬೆರೆತರೆ ಅದನ್ನು ನೋಡಿ ಮಕ್ಕಳು ಕಲಿಯುತ್ತಾರೆ.

ಯೋಚಿಸಿ ನೋಡಿ ಮಕ್ಕಳ ಬಾಲ್ಯ ಮತ್ತೊಮ್ಮೆ ಬರುವುದಿಲ್ಲ..... ಬಾಲ್ಯದಲ್ಲಿ ನಾವ್ ಆಡಿದ ಆಟಗಳಲ್ಲಿ ಕೊಂಚವಾದರೂ ಅವರಿಗೆ ಅನುಕೂಲ ಕಲ್ಪಿಸಿ. ಮಕ್ಕಳಲ್ಲಿ ಬದಲಾವಣೆ ಬಯಸುವುದಾದ್ರೆ ಮೊದಲುನಾವುನೀವುನಮ್ಮಅಭ್ಯಾಸಗಳನ್ನುಬದಲಾಯಿಸಿಕೊಳ್ಳಬೇಕು ಮಕ್ಕಳಿಗೆ ತಾಯಂದಿರು ಚಿಕ್ಕ ಕಥೆ ಹೇಳಿ ಹಾಡು ಹೇಳಿ ಸಾಧ್ಯವಾದರೆ ಆಟವಾಡಿಸಿ ಇದೆಲ್ಲಾ ಫೋನ್ನಲ್ಲಿ ಇದೆ ನೋಡಿಕೋ ಎಂದು ಹೇಳಿ ಫೋನ್ ಕೊಡಬೇಡಿ. ಮಕ್ಕಳೊಂದಿಗೆ ಮಾತಾಡಿ ನಕ್ಕು ನಲಿಯಿರಿ ಮನಸ್ಸು ಬಿಚ್ಚಿ ಮಾತಾಡಿ ಆಗಲೇ ಕುಟುಂಬದಲ್ಲಿ ಸಂತೋಷಕಾಣಲು ಸಾಧ್ಯ ಆಗಲೇ ರಜೆ.... ಸಜೆಯ ಬದಲಾಗಿ.... ಮಜಾ ಬರುತ್ತೆ ??



– ಜಿ ಆರ್ ಬಸವರಾಜೇಶ್ವರಿ

# ಚರಿತ್ರೆಗೆ ಚರಿತ್ರೆಯಾಗಲು ತಾಯಿಯ ಸಂಕಲ್ಪವೇ ಪ್ರೇರಣೆ

**"ಆಚಾರಕರ ಸಾಗು ನೀತಿಗೆ ಪ್ರಭುವಾಗು**
**ಮಾತಿನಲಿ ಚೂಡಾಮಣಿಯಾಗು: ನನಕಂದ**

ಜ್ಯೋತಿಯೇ ಆಗು ಜಗಕೆಲ್ಲ ಎನ್ನುವ ಧೃಡ ಸಂಕಲ್ಪವು ಹಡೆದ ತಾಯಿಯಿಂದಲೇ ಆಗಿರುತ್ತದೆ. ಹುಟ್ಟಿದ ಪ್ರತಿ ಒಬ್ಬ ವ್ಯಕ್ತಿಗಳಲ್ಲಿ ಪ್ರತಿಭೆಗಳಿರುತ್ತವೆ. ಅದನ್ನು ಸಾಕಾರಗೊಳಿಸುವ ವಾತಾವರಣ ಇರಬೇಕು ಅಷ್ಟೆ".

ಸೃಜನಸೀಲನು ಕ್ರಿಯಾಶೀಲನು ಆದ ಪ್ರತಿಭೆಯು ಮೈಗೂಡಿಸಿಕೊಂಡು ಪೌರುಷ ಹಾಗೂ ಪರಾಕ್ರಮದ ಅಲೆಯಿಂದ ನೆಲ, ಜಲ, ದೇಶ, ಭಾಷೆಯನ್ನು ರಕ್ಷಿಸಲು ಸಿದ್ದನಾಗಿರಬೇಕು. ವಾಸ್ತವದ ನೆಲೆಯಿಂದ ಹುಟ್ಟಿ ಬೆಳೆದ ಮಗು ಜನ ಗಣ ಮನವು ಸಕಾರಾತ್ಮಕ ಚಿಂತನೆಯಲ್ಲಿ ಪ್ರೀತಿ , ಶಾಂತಿಯನ್ನು ಹೆಚ್ಚಿಸುತ್ತದೆ. ಒಬ್ಬನು ತಾನು ಬದುಕುವ ಜೊತೆಗೆ ಇನ್ನೊಬ್ಬರಿಗೆ ಸಮ ಸಮಾಜದ ಪರಿವಾರಕ್ಕೆ ಪರಿವರ್ತನೆಯ, ಪರಿಕಲ್ಪನೆಯ ಅರಿವು ರಾಷ್ಟ್ರ ಶ್ರೇಷ್ಠನಾಗಲೂ ಸನ್ನದ್ಧನಾಗಿರಲು ಈ ಕೆಳಗಿನ ಸಾಲುಗಳಿಂದ ತಿಳಿಯಬಹುದು.

**" ಸಂಸಾರವೆಂಬುವುದು ಸಾಗರ ಹೊಳೆಯಪ್ಪ**
**ಈಸ ಬಲ್ಲನಿಗೆ ಎದೆಯುದ್ದ : ನನ ಕಂದ**

ಓದು ಬಲ್ಲವನಿಗೆ ಕೈಲಾಸ ಎಂದು ತಾಯಿಯು ತನ್ನ ಮಗನಿಗೆ ಸಲಹೆ ನೀಡುವ ಮೂಲಕ ಬದುಕಿನ ದಾರಿಗಳನ್ನು ಹೇಳಿ ಕೊಡುತ್ತಾಳೆ. ಅಲ್ಲದೆ ಮಗನು ದೈರ್ಯ, ಸಾಹಸ, ಗುಣಗಳಿಂದ ವಿದ್ಯಾಬುದ್ದಿಯು ಜೀವನ ಶೈಲಿಯನ್ನು ಸುಗಮಗೊಳಿಸುವುದಕ್ಕೆ ಸಿದ್ದಳಿರುತ್ತಾಳೆ. ಹಾಗೇ ಪ್ರತಿಯೊಬ್ಬ ಜನಮಾನಸದಲ್ಲಿ ಆದರ್ಶಗಳು ಪರಕಾಯ ಪ್ರವೇಶ ಮಾಡುವ ಮೂಲಕ ಕಾಳಜಿಯನ್ನು ತೋರಿಸುತ್ತಾಳೆ. ಹಾಗೇನೆ ತನ್ನ ಮಗು ಹಿತ್ತಾಳೆ ಧರಿಸಿ ಜ್ಞಾನದ ಕಣ್ತೆರೆಸಿ ಈ ನೆಲದ ಮಣ್ಣಿನ ಗುಣದಂತೆ ಬಾಳಿ, ಬದುಕಿ ಜೀವನದ ಹೆಗ್ಗಳಿಕೆಗೆ ತನ್ನ ಮಗನ ಶ್ರೇಷ್ಠತೆಗೆ

ಜೀವನ ಮೌಲ್ಯಗಳನ್ನು ತುಂಬಿ ಚರಿತ್ರೆಗೆ ಚರಿತ್ರೆಯಾಗಲೂ ತಾಯಿಯ ಸಂಕಲ್ಪವೇ ಆಗಿರುತ್ತದೆ ಎನ್ನುವುದಕ್ಕೆ ಈ ಕೆಳಗಿನ ಸಾಲುಗಳು ಸಾಕ್ಷಿಯಾಗಿವೆ.

**"ಮಾಳಿಗೆ ಮನೆ ಬೇಕ**
**ಜೋಳಿಗೆ ಹಣ ಬೇಕ**
**ರಾಮದೇವರಂತ ಮಗಬೇಕ**

ನಮ್ಮನಿಗೆ ಜಾನಕಿಯಂತ ಸೊಸೆಬೇಕ ಎಂದು ಮಗು ಹುಟ್ಟುವ ಮೊದಲೇ ಕುಲಾಯಿ ಹೊಲಿಸಿದಂತೆ ತನ್ನ ಆಶೆಯ ನುಡಿಗಳಲ್ಲಿ ಸಂಕಲ್ಪವನ್ನು ಮಾಡಿರುತ್ತಾಳೆ.

**ಶಿವನೊಲಿದು ಭೂಮಿಗೆ ಬಂದಾದ ಮೇಲೆ**
**ಬೆಳಕಾಗಿರು ಮಗನೇ ಬೆಳಕಾಗಿರು**
**ಇಳೆ ಲೋಕ ಬಳಗದಲಿ ಸೊಗಸಾಗಿರು**
**ನಿಂಬೆಯ ಹಣ್ಣಂತೆ ತುಂಬಿದ ಬಾಳಲ್ಲಿ**
**ಕಡಲು ಕಾನನ ನಡುವೆ ರಿಷಿಯಾಗಿರು**

ಈ ನನ್ನ ಮಾತಿನಂತೆ ತಾಯಿಯು ತನ್ನ ಮಗನ ಜೀವನದ ಏಳು ಬೀಳಿಗೆ ದೇವರು ಅಡ್ಡಿಪಡಿಸದೇ ಇರಲಿ ಯಾವಾಗಲೂ ಲೋಕ ಕಲ್ಯಾಣಕ್ಕಾಗಿ ಜೀವ ಜೀವನವನ್ನು ತ್ಯಾಗ ಮಾಡುವ ಮೂಲಕ ಮಕ್ಕಳ ಏಳಿಗೆಗೆ ಶ್ರಮಿಸುತ್ತಾಳೆ. ಆದರೆ ಈಗ ತಾಯಿಯ ಆಶಯಕ್ಕೆ ತಕ್ಕಂತೆ ಮಕ್ಕಳು ಬೆಳೆಯದೇ ಇರುವುದು ಬೇಸರದ ಸಂಗತಿಯಾಗಿದೆ ಎಂದು ಡಾ॥ ಯಂಡಮೂರಿ ವೀರೇಂದ್ರನಾಥರ ಸೂಕ್ತಿಗಳನ್ನು ಈ ಕೆಳಗಿನಂತೆ ತಿಳಿಯಬಹುದಾಗಿದೆ. " ಈ ನವ ಭಾರತದ ನಿರ್ಮಾಣದಲ್ಲಿ ಕುಟುಂಬ ವ್ಯವಸ್ಥೆ ಪೂರ್ತಿಯಾಗಿ ಭಿನ್ನವಾಗಿವೆ.

"ಮಕ್ಕಳು ಬಾಲ್ಯವನ್ನು,,, ದೊಡ್ಡವರು ಯೌವ್ವನವನ್ನು ಕಳೆದುಕೊಳ್ಳುತ್ತಿದ್ದಾರೆ ಯಾವುದಕ್ಕಾಗಿ ಏನನ್ನು ಬಿಡಬೇಕೆಂದು ತಿಳಿಯದ ಪರಿಸ್ಥಿತಿ ಏರ್ಪಟ್ಟಿದೆ. ಜೀವನವನ್ನು ಆನಂದಿಸುವ ಬದಲಾಗಿ ಕರ್ತವ್ಯವನ್ನು ನಿರ್ವಹಿಸಿದರೆ ಸಾಕು ಎನ್ನುವ ಅಭಿಪ್ರಾಯ ಹೆಚ್ಚಾಗಿದೆ. ಸಂತೋಷದ ಸ್ಥಾನದಲ್ಲಿ ಸುಖ, ಮನೆ ಮಾಡಿಕೊಂಡಿದೆ. ಮಕ್ಕಳನ್ನು ಕಾರ್ಪೊರೇಟ್ ಶಾಲೆಗಳಿಗೆ ಶರೀರವನ್ನು ಕಾರ್ಪೊರೇಟ್ ಕಂಪನಿಗಳಿಗೆ ಕಣ್ಣುಗಳನ್ನು ಭಾನುವಾರದ ಟಿ ವಿ ಕಾರ್ಯಕ್ರಮಗಳಿಗೆ ಒಪ್ಪಿಸಿಕೊಂಡು ಬದುಕುವುದೇ ದಿನಚರಿ ಆಗಿ ಬಿಟ್ಟಿದೆ. ಈ ಮಾತನ್ನು ಸ್ವಲ್ಪ ಗಮನಿಸಿದರೆ ಶಿಕ್ಷಣದ ನೆಪದಲ್ಲಿ ಸ್ವದೇಶಿಯ ಸೊಗಡು ಹಾಗೂ ಸಮಸ್ಕಾರ ಸಂಸ್ಕೃತಿಯನ್ನು ದೂರ ತಳ್ಳುವುದಾಗಿದೆ. ಇಂದು ನಾವು ಜೇನು ನೊಣಗಳಮತೆ ಒಟ್ಟಾಗಿರುವುದನ್ನು ನೋಡಿ ಕಲಿಯಬೇಕಾಗಿದೆ. ಅಲ್ಲದೆ ತಾಯಿಯರು ಮಕ್ಕಳಲ್ಲಿ ಸಾಧಾರಣ ಗುಣಗಳನ್ನು ರೂಡಿಸಬೇಕಾಗಿದೆ.


ಜಿ.ಯರಿಸ್ವಾಮಿ ಸಂಕ್ಲಾಪುರ
ಹೊಸಪೇಟೆ

Scan For Digital Colourful
HAMPI TIMES E-paper

ಪ್ರತಿಯೊಬ್ಬ ತಾಯಿಯು ಲೋಕಾಭಿವೃದ್ದಿಗೆ ತನ್ನಿಂದ ಆಗದ್ದನ್ನು ತನ್ನ ಮಕ್ಕಳ ಮೂಲಕ ಸಾಧಿಸಿದ ಸಾಧನೆಗಳನ್ನು ಕಣ್ತುಂಬಿ ಕೊಳ್ಳಲು ಇಷ್ಟಪಡುತ್ತಾಳೆ. ಈಗಾಗಲೇ ಸಾಧನೆಯಲ್ಲೆ ಸಾಧಿಸಿ ಅಜರಾಮರರಾಗಿದ್ದ ಸಾಧಕರು, ಸಂತರು, ಶರಣರು, ದಾಸರು, ಜ್ಞಾನಿ ವಿಜ್ಞಾನಿಗಳು, ಶ್ರಮಿಕರು, ಚಿಂತಕರು ಇನ್ನು



ಮುಂತಾದವರನ್ನು ನೋಡಿದ್ದು ಅದರಂತೆ ತನ್ನ ಮಕ್ಕಳಲ್ಲಿ ರೂಡಿಸಿ ಬೆಳೆಸುವ ತವಕವನ್ನು ನೋಡಿದಾಗ ಕಲ್ಪನೆಯಿಂದಲೇ ಕಲ್ಪವೃಕ್ಷವು ಎನ್ನಬಹುದು. ಮಾನವರು ದೇವರಾಗಿ ಬೆಳೆಸಿದ ಅಮೃತ ಮಯಿಗಳು ಆದ ಅನೇಕ ಪವಾಡ ಪುರುಷರನ್ನು ಎತ್ತಿ ಬೆಳೆಸಿದ್ದು ತಾಯಿಯೇ.

ವಾಸ್ತವದ ಬದುಕಿನಲ್ಲಿ ಪರಿಪೂರ್ಣರಾಗಲೂ ಒಳ್ಳೆಯ ಪರಿಸರ ಸಮಾಜದ ವಾತಾವರಣ ನಮ್ಮನ್ನು ಪರಿವರ್ತನೆಗೊಳಿಸುತ್ತದೆ. ಆ ಸಮಯ ಸಂದರ್ಬಕ್ಕೆ ತಕ್ಕಂತೆ ಜಗದ ಪರಿವರ್ತನೆಗೆ ಸಹಕರಿಸಿದ ತಾಯಿಯ ತಾಳ್ಮೆ ಹಾಗೂ ಸಹಜ ಗುಣದ ಮೂಲಕವೇ ಎಂದು ಹೇಳಬಹುದು. ಅದಕ್ಕೇಂದೇ ತತ್ವಜ್ಞನಿಯಾದ ಶಿಶುನಾಳ ಶರೀಪರು ತಮ್ಮ ತತ್ವದ ಪದದ ಸಾಲುಗಳಲ್ಲಿ

**"ಲೋಕದ ಕಾಳಜಿ ಮಾಡುತ್ತೀನಂತಿ**
**ನಿನಗ್ಯಾರು ಬ್ಯಾಡಂತಾರ ಮಾಡಪ್ಪ ಚಿಂತಿ**
**ನೀ ಮಾಡೋದ ಘಳಿಗೆ ಸಂತಿ**
**ಮೇಲು ಮಾಳಿಗೆ ಕಟ್ಟಬೇಕಂತಿ**
**ಆನೆ ಅಂಬಾರಿ ಏರಬೇಕಂತಿ**
**ಮಣ್ಣಲ್ಲಿ ಇಳಿಯೋದ ತಣ್ಣಗ ಮರತಿ"**

ಎನ್ನುವ ಈ ಮಾತುಗಳು ಸಾಂದಾರ್ಬಿಕವಾಗಿ ಸತ್ಯವೇ ಆಗಿವೆ. ಈ ಸೃಷ್ಠಿಯ ಪ್ರೇರಣೆಯಿಂದ ಅನೇಕ ರಾಜ ಮಹಾರಾಜರು ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಹೋಗಿದ್ದಾರೆ. ಜ್ಞಾನಿ ವಿಜ್ಞಾನಿಗಳು ಹೊಸ ಹೊಸ ಆವಿಷ್ಕಾರಗಳನ್ನು ಕಂಡು ಹಿಡಿದಿದ್ದಾರೆ. ಹಲವಾರು ಚಿಂತಕರು ಸಮಾಜವನ್ನು ಸುಧಾರಿಸಿದ್ದಾರೆ ಎನ್ನುವ ಯಶೋಗಾಥೆ ಕಥೆಗೆ ಪ್ರೇರಣೆ ಕೂಡಾ ಹೌದು.

ಅನೇಕ ದಾರ್ಶನಿಕರು ಸಮಾಜ ಸುದಾರಕರು, ಕವಿಗಳು, ಲೇಖಕರು, ಶ್ರೇಷ್ಠ ರಾಜಕಾರಣಿಗಳು, ಬುದ್ದಿ ಜೀವಿಗಳು, ವಿದ್ವಾಂಸರು, ವಿಜ್ಞಾನಿಗಳು, ಪಂಡಿತರು, ವಾಗ್ಮಿಗಳು, ತಮ್ಮ ಸತ್ಯ , ಶಾಂತಿ , ನೀತಿ, ಪ್ರೀತಿಗಳಿಂದ ಲೋಕದ ನಡವಳಿಕೆಗೆ ತಕ್ಕಂತೆ ವೀರ ಶುರರು ಜನಿಸಿ, ಲೋಕ ಸುಧಾರಣೆ ಮಾಡಿದ್ದಾರೆ. ಅವರೆಂದರೆ ಕೆಲವು ವ್ಯಕ್ತಿಗಳ ಮೂಲಕ ಉದಾಹರಿಸಬಹುದು.

ಬುದ್ದ, ಬಸವ, ಗಾಂಧಿ, ಅಂಬೇಡ್ಕರ್ ದಾರ್ಶನಿಕರು. ಅಲೆಗ್ಸಾಂಡರ್, ನೆಪೋಲಿಯನ್, ಸಾಮ್ರಾಟ ಅಶೋಕ, ಛತ್ರಪತಿ ಶಿವಾಜಿ, ಝಾನ್ಸಿ ರಾಣಿ ಲಕ್ಷ್ಮೀಬಾಯಿ ಅಂತಹ ಮಹಾನ್ ವ್ಯಕ್ತಿಗಳನ್ನು ಹಾಗೂ ರಾಜಾರಾಂ ಮೋಹನ್ ರಾಯ್, ಜ್ಯೋತಿ ಬಾಪುಲೆ, ಮೀರಾಬಾಯಿ, ಸ್ವಾಮಿ ವಿವೇಕಾನಂದ, ರಾಮಕೃಷ್ಣ ಪರಮಹಂಸರಂತಹ ಸಮಾಜ ಸುಧಾರಕರು , ಡಾ॥ ಎ. ಪಿ. ಜೆ. ಅಬುಲ್ ಕಲಾಂ, ಯು ಆರ್. ರಾವ್. ಡಾ॥ ಕಸ್ತೂರಿ ರಂಗನ್, ಕಲ್ಪನಾ ಚಾವ್ಲಾ ರಂತಹ ವಿಜ್ಞಾನಿಗಳು ನೆಹರು, ಪಟೇಲ್, ಲಾಲ್ ಬಹದ್ದೂರ ಶಾಸ್ತ್ರಿ, ದೇವರಾಜ್ ಅರಸ್ ರಂತಹ ಪ್ರಾಮಾಣಿಕ ರಾಜಕಾರಣಿಗಳು ಶಾಂತಿಯಿಂದಲೇ ಕ್ರಾಂತಿಗೆ ಮುನ್ನುಡಿ ಬರೆದ ನೆಲ್ಸನ್ ಮಂಡೆಲ, ಲಿಯೋ ಟಾಲ್ಸ್ ಟಾಯ್, ಮದರ್ ಥೆರೆಸಾ, ಆನಿಬೆಸೆಂಟ್ ರಂತಹ ಶ್ರೇಷ್ಠ ಮಹೋದಯರಿಗೆ ಜನ್ಮ ನೀಡುವಾಗ ದೃಡ ಸಂಕಲ್ಪ ಮಾಡಿ ಸಾಧನಾ ಲೋಕದಲ್ಲಿ ಸಂಭ್ರಮಿಸಿದವಳು ತಾಯಿಯ ಸಂಕಲ್ಪವೇ ಆಗಿರುತ್ತದೆ.

ಆದರೆ ಇಂದು ದ್ವೇಷ ಅಸೂಯೆ, ಹಿಂಸೆ, ಕ್ರೌರ್ಯ, ಕೊಲೆ ಸುಲಿಗೆಗಳನ್ನು ತಡೆಗಟ್ಟಲೆಂದೇ ಸಂವಿಧಾನದ ದಾರಿಯಲ್ಲಿ ತಮ್ಮ ಮಿತಿಯಲ್ಲಿ ಕಾರ್ಯ ಮಾಡಿದವರೆಂದರೆ ಕಿರಣ್ ಬೇಡಿ, ಟಿ. ಎನ್. ಶೇಷನ್ , ವೆಂಕಟಾಚಲಪತಿ, ಕೆಂಪಯ್ಯ ಐಪಿಎಸ್, ಲೋಕಾಯುಕ್ತ ಸಂತೋಷ ಹೆಗಡೆ, ಸಮಾಜ ಪರಿವರ್ತನಾ ಸಂಘದ ಅಧ್ಯಕ್ಷ ಹಿರೇಮಠರಂತಹ ಅನೇಕ ದೈರ್ಯಶಾಲಿಗಳಿಂದ ನಾಡು ನುಡಿಯು ಶಾಂತಿಯುತವಾಗಿ ಮುನ್ನಡೆಯುತ್ತದೆ.

ಅಂತಹ ಜನ ಕಲ್ಯಾಣಕ್ಕಾಗಿ ಲೋಕ ಹಿತವನ್ನು ಬಯಸಿ ಅಂಜನಾ ದೇವಿಯು ಹನುಮನನ್ನು, ಕೌಸಲ್ಯ ರಾಮನನ್ನು, ಜೀಜಾಬಾಯಿಯು ಶಿವಾಜಿಯನ್ನು, ಪುತಲೀಬಾಯಿ ಗಾಂದೀಜಿಯನ್ನು ಈ ಲೋಕಕ್ಕೆ ಕರೆತಂದು ಜನ್ಮ ನೀಡುವ ಮೊದಲೇ ಪರಿವರ್ತನೆಯ ಪರಿಕಲ್ಪನೆಗೆ ಸಂಕಲ್ಪ ಮಾಡಿ ಈ ಮಹನೀಯರಂತೆ ಮುಂದೇ ಕೂಡ ಅನೇಕ ಮಹನೀಯರು ಜನ್ಮ ತಾಳಿ ಕಾಲಕ್ಕೆ ತಕ್ಕಂತೆ ಚರಿತ್ರೆಯನ್ನು ಸೃಷ್ಠಿಸಲು ಚರಿತ್ರೆಗೆ ಚರಿತ್ರೆಯಾಗಲು ದೃಡ ಸಂಕಲ್ಪದಿಂದಲೇ ಮಕ್ಕಳಿಗೆ ತಾಯಿಯೇ ಮೊದಲ ದೇವರು, ಮನೆಯೆ ಪಾಠ ಶಾಲೆ, ಮಕ್ಕಳಿಗೆ ತಾನೆ ಮೊದಲ ಗುರುವಾಗಿ ಕಲಿಸಿ ಶಾಂತಿ ಸಮೃದ್ದಿಗೆ , ಲೋಕದ ಹಿತಕ್ಕೆ ತಾಯಿಯೇ ಮಕ್ಕಳಿಗೆ ಸರ್ವ ಶ್ರೇಷ್ಠಳಾಗಿ ಕಾಣಿಸಿಕೊಳ್ಳುವುದರ ಜೊತೆಗೆ ಅಭಿವೃದ್ದಿಯ ಲೋಕಕ್ಕೆ ಮುನ್ನೋಟ ನೀಡುವ ಆತ್ಮಸಂಜೀವಿನಿಯೇ ತಾಯಿ ಎಂದು ಹಿಂದಿನ ಕಾಲದಿಂದ ಇಂದಿನ ಕಾಲದವರೆಗೂ ಅನೇಕ ಸರ್ವ ಶ್ರೇಷ್ಠರ ಇತಿಹಾಸವನ್ನು ತಿಳಿದಾಗ ತಾಯಿಯು ಸಾಧನೆಗೆ ಪ್ರೇರಣೆ ಎಂದು ಕಂಡುಬರುತ್ತದೆ.

## ಕವಿ ಮನಸು

### ಬಾಲ್ಯದಾಟ

ಕಾಲ್ ಚಂಡಿನಾಟ ಅಚ್ಚು ಮೆಚ್ಚು
ಹರಕು ಚಿಂದಿ ಬಟ್ಟೆಯ ಚಂಡು
ಚಂಡಿಗೆ ಕೋತಿ ಬಾಲದಂತ ದಾರ
ನಡು ಕಾಲ್ಬೆರಳಿಗೆ ಸಿಕ್ಕಿಸಿ ಆಡುವ ಆಟ॥

ಗೋಲಿ ಆಟ ಬಲು ಅಚ್ಚು ಮೆಚ್ಚು
ನಾವೇ ತಯ್ಯಾರಿಸಿದ ಗೋಲಿಗಳು
ಗೋದಿಕಲ್ಲಿನ ಚಪ್ಪಡಿ ಗುಡ್ಡದಿಂದ ತಂದು
ಮಳೆ ಬಿಸಿಲೆನ್ನದೆ ಕಟೆದ ಗೋಲಿಗಳು॥

ಕಬಡಿ ಆಟ ಚಂದದ ಆಟ
ನಾವೇ ಸುಣ್ಣದ ಗೇರೆ ಎಳೆದು
ಆ ಕಡೆ ಈ ಕಡೆ ಒಂದಿಷ್ಟು ಮಂದಿ
ಶಕ್ತಿ ಪ್ರದರ್ಶಿಸಿ ಗೇರೆ ಮುಟ್ಟುವ ಆಟ॥

ಕೋತಿ ಆಟ ಹುರುಪಿನ ಆಟ
ದೊಡ್ಡ ಮರವೇರಿ ಇಳಿವ ಆಟ
ಕೈ ಕಾಲು ಪೆಟ್ಟಾದರೂ ಬಿಡದ ಆಟ
ದಣಿವರಿಯದ ಸೊಗಸಿನ ಆಟ॥

ಗಜಗ ಗುಂಡಾದ ಸ್ಪೂರ್ತಿಯ ಆಟ
ಗುರಿಯಿಟ್ಟು ಹೊಡೆಯುವ ಆಟ
ಗೆದ್ದು ಗಜಗ ಗುಂಡಾ ಗಳಿಸುವ ಆಟ
ನಾ ಗೆದ್ದೆನೆಂಬ ಅಹಂ ಪಡುವ ಆಟ॥

ದಣಿದು ಬೆವರಿಳಿಸುವ ಮೋಜಿನ ಆಟ
ಹಸಿದ ಹೊಟ್ಟೆಗೆ ಆರೋಗ್ಯದ ಆಟ
ಎಲ್ಲಿ ಹೋದವು ಆ ಆಟಗಳು?
ಮೊಬೈಲ್ ಭರಾಟೆಯಲಿ ಮುಳುಗಿದವು!!

– ಚಂದ್ರಶೇಖರಯ್ಯ ರೋಣದಮಠ

### ಮತ ಅಭಿಮತ

ಸಾಮಾನ್ಯ ಪ್ರಜೆಗಳಾದ ನಾವುಗಳು
ಇಂದು ಮತದಾರ ಪ್ರಭುಗಳು
ನಮ್ಮ ಮತದಲ್ಲಿ ಅಡಗಿದೆ ದೇಶದ ಹಿತ
ಕಡ್ಡಾಯವಾಗಿ ಚಲಾಯಿಸೋಣ ಮತ
ಎಳೆಯೋಣ ಪ್ರಜಾಪ್ರಭುತ್ವದ ರಥ

ಚುನಾವಣೆ ಕರ್ತವ್ಯದಲ್ಲಿ ನಿರತರಾದವರ
ಪರಿಶ್ರಮ
ಮನದಲ್ಲಿ ಗೌರವಿಸಿ ಆರಕ್ಷಕರು ಸೈನಿಕರ
ಶ್ರಮ
ಹೆಮ್ಮೆಪಡಿ ಇವರೆಲ್ಲರ ಶ್ರಮದಿಂದಲೇ ನಾವು
ಕ್ಷೇಮ
ಕಡ್ಡಾಯ ಮತದಾನದ ಮೂಲಕ
ಮಾಡೋಣ ಅವರಿಗೆ ಸನ್ಮಾನ
ಆಗಲೇ ಸಾರ್ಥಕ ಮತದಾನ ಜಾಗೃತಿ
ಅಭಿಯಾನ

ಜಾತಿ ಮತಗಳ ಸಂಕೋಲೆ ಮರೆತು
ಮಾಡು ಮತದಾನ
ಆಮಿಷಗಳ ತೊರೆದು ಆರಿಸು
ಜನನಾಯಕನ
ಮತದಾನಕ್ಕೆ ರಜೆಯೆಂದು ಮಾಡದಿರಿ
ಪ್ರಯಾಣ
ಆತ್ಮಾಭಿಮಾನದಿ ತಪ್ಪದೆ ಮತ
ಚಲಾಯಿಸೋಣ
ಪ್ರಜಾಪ್ರಭುತ್ವದ ಹಬ್ಬವನ್ನು
ಯಶಸ್ವಿಗೊಳಿಸೋಣ

– ಸಂಗಮೇಶ ಹೂಗಾರ
ಬಿ.ಡಿ.ಸಿ.ಸಿ ಬ್ಯಾಂಕ್ ಹೊಸಪೇಟೆ

ಉಚಿತ-ಖಚಿತ!
ಪತ್ರಿಕೆಯ ಓದು ಕಣ್ಣಿಗೆ ಹಿತ, ಮೊಬೈಲ್ ಓದು ಉಚಿತ, ಕಣ್ಣಿಗೆ ಹಾನಿ ಖಚಿತ!

ಮಕ್ಕಳ ಕೈಗೆ ಮೊಬೈಲ್ ಬದಲಿಗೆ, ಪತ್ರಿಕೆ ನೀಡಿ ಬದಲಾವಣೆ ಕಾಣಿರಿ...
ಸ್ಥಳೀಯ ಸುದ್ದಿಗಳಿಗಾಗಿ ಹಂಪಿ ಟೈಮ್ಸ್ ಪತ್ರಿಕೆ ಓದಿರಿ
ಹಂಪಿ ಟೈಮ್ಸ್ ಬಳಗದ ಕಳಕಳಿ
ಬೆಲೆ ರೂ 2


ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

## ಬಿಸಿಲ ಬೇಗೆಯಿಂದ ಬಳಲುತ್ತಿರುವ ಭೂತಾಯಿಯ ಒಡಲನ್ನು ತಂಪಾಗಿಸುವುದು ಹೇಗೆ?

ಈ ವರ್ಷದ ಬೇಸಿಗೆ ಕಾಲ ಎಲ್ಲರನ್ನೂ ಹೈರಾಣಾಗಿಸಿದೆ. ಭೂಮಿ ಕೆಂಡದ ರೀತಿ ಸುಡುತ್ತಿದೆ .ಭಾರತವಷ್ಟೇ ಅಲ್ಲದೆ ದಕ್ಷಿಣ ಏಷ್ಯಾದ ಎಲ್ಲೆಡೆ ಹೆಚ್ಚಿನ ತಾಪಮಾನ ದಾಖಲಾಗಿದೆ. ಬರಿಯ ಬೆಚ್ಚಗಾಗುತ್ತಿದ್ದ ಬೆಂಗಳೂರು ನಲವತ್ತರ ಆಸುಪಾಸಿನ ತಾಪಮಾನ ದಾಖಲಿಸಿದರೆ ತಣ್ಣಗಿದ್ದ ಊಟಿ ಕೊಡೈಕೆನಾಲ್ ಕೂಡ ಮೂವತ್ತರ ಮೇಲೆ ತಾಪಮಾನ ಹೊಂದುತ್ತಿದೆ.

ಇವೆಲ್ಲ ಜಾಗತಿಕ ತಾಪಮಾನ ಹೆಚ್ಚಳದ ಪರಿಣಾಮಗಳೇ ಆಗಿವೆ. ಅತಿವೃಷ್ಟಿಯ ಕೆಲವು ವರ್ಷ ಕಳೆದ ಮೇಲೆ ಈಗ ಬರ ಅನಾವೃಷ್ಟಿ ಕಾಡುತ್ತಿದೆ. ನೀರಿನ ಕೊರತೆ ಮುಗಿಲು ಮುಟ್ಟಿದೆ. ನಗರಗಳಲ್ಲಂತೂ ನೀರಿಗಾಗಿ ಹಾಹಾಕಾರ ಶುರುವಾಗಿದೆ.

ಹಾಗಾದರೆ ಇದಕ್ಕೆ ಪರಿಹಾರ ಇಲ್ಲವೇ. ಮತ್ತೆ ತಣ್ಣನೆಯ ದಿನಗಳನ್ನು ಕಾಣುವುದು ಸಾಧ್ಯವಿದೆಯೇ? ಬಿಸಿಯಾಗುತ್ತಿರುವ ಭೂಮಿಯನ್ನು ತಣಿಸಬಲ್ಲವೇ ? ಖಂಡಿತ ಉತ್ತರ ಸಾಧ್ಯ ಎಂದು ಹೇಳಬಹುದು.



ಮಾನವನ ಇಚ್ಛಾಶಕ್ತಿಗೆ ಅಸಾಧ್ಯವಾದುದ್ದು ಯಾವುದೂ ಇಲ್ಲ . ಮೊದಲು ನಾವು ನಮ್ಮ ದುರಾಸೆಗೆ ನಗರೀಕರಣ ರಸ್ತೆ, ಹೆದ್ದಾರಿ ಕಾರ್ಖಾನೆ ಮನೆ ಕಟ್ಟುವಿಕೆ ಮೆಟ್ರೋ ಹೀಗೆ ಹಲವು ಹತ್ತು ಕಾರಣ ಹೇಳಿ ಕಡಿದ ಕಾಡು ಹಸಿರ ಹೊದ್ದಿಕೆಯನ್ನು ಮರಳಿ ತರಬೇಕು. ಪ್ರತಿಯೊಬ್ಬರೂ ಒಂದು ಗಿಡ ನೆಟ್ಟರೂ ಬೆಂಗಳೂರಲ್ಲೇ ಅದರ ಸಂಖ್ಯೆ ಕೋಟಿ ದಾಟುತ್ತದೆ. ಬರಿಯ ವನಮಹೋತ್ಸವಕ್ಕೆ ಸೀಮಿತವಾಗದೆ ಗಿಡನೆಟ್ಟು ಬೆಳೆಸುವ ಸಂಕಲ್ಪ ಕೈಗೊಳ್ಳಬೇಕು.

ಜಾಗತಿಕ ಮಟ್ಟದಲ್ಲಿ ಇಂಗಾಲದ ಹೆಜ್ಜೆ ಗುರುತುಗಳನ್ನು ಕಡಿಮೆಮಾಡುವ ಕಡಿಮೆ ಇಂಧನ ಉರಿಸುವ ಮಾತುಕತೆಯಾಗುತ್ತಿದೆ. ಇದು ಬರಿಯ ಕಾಗದದಲ್ಲಿ ಉಳಿಯದೆ ಅನುಷ್ಠಾನಕ್ಕೆ ಬರಬೇಕು. ನವೀಕರಿಸಬಹುದಾದ ಇಂಧನ ಹೆಚ್ಚು ಹೆಚ್ಚು ಸೌರಶಕ್ತಿಯ ಬಳಕೆಗೆ ಅನುವು ಮಾಡಿ ಪ್ರೋತ್ಸಾಹಿಸಬೇಕು .

ಬ್ಯಾಟರಿ ಅಥವಾ ಜಲಜನಕ ಚಾಲಿತ ವಾಹನಗಳ ಬಳಕೆ ಹೆಚ್ಚು ಮಾಡಬೇಕು. ವಿದ್ಯುಚ್ಛಕ್ತಿಯ ಉತ್ಪಾದನೆಯಲ್ಲೂ ಹಸಿರಿನ ಕ್ರಮ ಅನುಸರಿಸಿ ಕಲ್ಲಿದ್ದಲಿನ ಬಳಕೆ ನಿಲ್ಲಿಸಬೇಕು ನಗರದಲ್ಲಿ ಪ್ರತೀ ಮನೆಗೂ ಮಳೆ ಕೊಯ್ಲು ಕಡ್ಡಾಯ ಮಾಡಿ ನೀರನ್ನು ಹಿಡಿದಿಟ್ಟು ಕೊಳ್ಳುವ ಕ್ರಮ ಹಾಗೂ ನೀರನ್ನು ಸಂಸ್ಕರಿಸಿ ಬಳಸುವ ಕ್ರಮಗಳನ್ನು ಕೈಗೊಳ್ಳಬೇಕು.

ಕೆರೆಗಳ ಮೇಲೆ ಮಣ್ಣು ತುಂಬಿ ಒತ್ತುವರಿ ಮಾಡಿ ಮನೆಕಟ್ಟುವುದನ್ನು ಬಿಟ್ಟು, ಅದರ ರಕ್ಷಣೆಯನ್ನು ಮಾಡಿ ಕೆರೆಗಳ ಪುನಶ್ಚೇತನ ಕೈಗೊಂಡು ಜಲಮೂಲಗಳ ಸಂರಕ್ಷಣೆ ಮಾಡಬೇಕು. ಪರಿಸರದ ಸಂರಕ್ಷಣೆಗೆ ಕಟೀಬದ್ಧರಾಗಿ ಮಕ್ಕಳಿಂದ ವಯಸ್ಸಾದವರ ಮೊದಲಾಗಿ ಎಲ್ಲರೂ ಈ ದಿಕ್ಕಿನಲ್ಲಿ ಕಾರ್ಯ ಪ್ರವೃತ್ತರಾಗಬೇಕು. ಪರಿಸರಕ್ಕೆ ಮಾರಕವಾಗುವ ಯಾವುದೇ ಕ್ರಮ ಹಾಗೂ ಅಕ್ರಮ ಎಸಗುವವರ ಮೇಲೆ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಜರುಗಿಸಬೇಕು ಹೀಗೆ ನಾವು ಸಮರೋಪಾದಿಯಲ್ಲಿ ಕೆಲಸ ಮಾಡಿದರೆ ಮಾತ್ರ ಭೂಮಿ ತಂಪಾದೀತು. ಇಲ್ಲವಾದರೆ ಇನ್ನು ಕೆಲವೇ ದಶಕಗಳಲ್ಲಿ ಭೂಮಿ ಮಂಗಳ ಗ್ರಹದಂತಾದರೆ ಆಶ್ಚರ್ಯವಿಲ್ಲ. ಆದ್ದರಿಂದ ಹೆಚ್ಚು ಗಿಡ ನೆಡೋಣ ಭೂಮಿಯನ್ನು ತಂಪಾಗಿಟ್ಟು ನಾವೂ ತಂಪಾಗಿರೋಣ.


– ಚೇತನಾ ಭಾರ್ಗವ

ಹಂಪಿ ಟೈಮ್ಸ್
HAMPI TIMES

# ಮತ ಚಲಾಯಿಸಿ ಐತಿಹಾಸಿಕಗೊಳಿಸಿ

## ನಿತ್ಯ ಪಂಚಾಂಗ

ಮಾಸ: ಚೈತ್ರ | ಸಂವತ್ಸರ: ಕ್ರೋಧಿ

**03-05-2024 – ಶುಕ್ರವಾರ**

| | |
|---|---|
| ತಿಥಿ | : ದಶಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಶತಭಿಷ |
| ಯೋಗ | : ಬ್ರಹ್ಮ |
| ಕರಣ | : ವಾಣಿಜ |
| ಸೂರ್ಯೋದಯ | : 05:54:29 |
| ಸೂರ್ಯಾಸ್ತ | : 18:54:20 |
| ರಾಹು | : 10:46–12:24 |
| ಯಮಘಂಡ | : 15:39–17:17 |
| ಗುಳಿಕ | : 07:31–09:09 |

## ತುಂಗಭದ್ರಾ ನೀರಿನ ಮಟ್ಟ



ಗುರುವಾರ : 02–05–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1578.03 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 120 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.584 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1575.77 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 129 ಕ್ಯುಸೆಕ್ |
| ಸಾಮರ್ಥ್ಯ | 2.747 ಟಿಎಂಸಿ |

# ಮತ ಚಲಾಯಿಸಿ, ಉತ್ತಮ ನಾಯಕರನ್ನು ಆಯ್ಕೆ ಮಾಡಿ

**ನ್ಯಾ.ಪುಷ್ಪಾಂಜಲಿ ದೇವಿ ಹೇಳಿಕೆ | ಜಿಲ್ಲಾ ನ್ಯಾಯಾಲಯ ಆವರಣದಲ್ಲಿ ಮತದಾನ ಜಾಗೃತಿ**



**ಹಂಪಿ ಟೈಮ್ಸ್ ಬಳ್ಳಾರಿ**

ಎಲ್ಲಾ ಅರ್ಹ ಮತದಾರರಿಗೂ ಮತದಾನ ಮಾಡಲು ಅವಕಾಶವಿದ್ದು, ಅದನ್ನು ಕಳೆದುಕೊಳ್ಳದೇ ಮೇ 07 ರಂದು ಲೋಕಸಭಾ ಚುನಾವಣೆಗೆ ತಪ್ಪದೇ ಮತ ಚಲಾಯಿಸಿ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಆದ ಎಸ್. ಹೆಚ್.ಪುಷ್ಪಾಂಜಲಿ ದೇವಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಹಾಗೂ ಜಿಲ್ಲಾ ವಕೀಲರ ಸಂಘ ಇವರ ಸಂಯುಕ್ತಾಶ್ರಯದಲ್ಲಿ ಲೋಕಸಭಾ ಚುನಾವಣೆಯಲ್ಲಿ ನಿರ್ಭೀತರಾಗಿ ನೈತಿಕ ಮತದಾನ ಮಾಡುವ ಕುರಿತು ಗುರುವಾರದಂದು ನಗರದ ತಾಳೂರು ರಸ್ತೆಯ ಹೊಸ ಜಿಲ್ಲಾ ನ್ಯಾಯಾಲಯದ ಸಂಕೀರ್ಣದ ಆವರಣದಲ್ಲಿ ಏರ್ಪಡಿಸಿದ್ದ ಪ್ರತಿಜ್ಞಾವಿಧಿ ಭೋದನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮತದಾನ ಮಾಡುವುದು ಸಂವಿಧಾನದ ಬಹುಮುಖ್ಯ ಹಕ್ಕಾಗಿದ್ದು, 18 ವರ್ಷ ತುಂಬಿದ ಪ್ರತಿಯೊಬ್ಬ ಅರ್ಹ ಮತದಾರರು ಅವಕಾಶ ವಂಚಿತರಾಗದೇ ತಪ್ಪದೇ ಮತದಾನ ಮಾಡಬೇಕು. ಪ್ರಜಾಪ್ರಭುತ್ವಕ್ಕೆ ಉತ್ತಮ ನಾಯಕರನ್ನೇ ಆಯ್ಕೆ ಮಾಡಬೇಕು ಎಂದರು.

ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷರು ಹಾಗೂ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಮಾತನಾಡಿ, ಮೇ 07 ರಂದು ಎಲ್ಲಾ ನಾಗರಿಕರು ತಪ್ಪದೇ ಮತ ಚಲಾವಣೆ ಮಾಡಿ, ಇತರರನ್ನು ಮತ ಚಲಾಯಿಸಲು ತಪ್ಪದೇ ಮತಗಟ್ಟೆಗೆ ಕರೆತನ್ನಿ ಎಂದು ಹೇಳಿದರು.

ಮತದಾನ ದಿನದಂದು ಮತಗಟ್ಟೆ ಕೇಂದ್ರಗಳ ಬಳಿ ಶ್ಯಾಮಿಯಾನ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ನೆರಳಿನ ವ್ಯವಸ್ಥೆ, ಶೌಚಾಲಯ ಸೇರಿದಂತೆ ಗರ್ಭಿಣಿಯರಿಗೆ, ಹಿರಿಯ ನಾಗರಿಕರಿಗೆ ಮತ್ತು ಅಂಗವಿಕಲರಿಗೆ ಪ್ರತ್ಯೇಕ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಈ ಬಾರಿ ಶೇಕಡವಾರು ಮತದಾನ ಹೆಚ್ಚಳವಾಗಲು ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಚುನಾವಣಾ ರಾಯಭಾರಿಯಂತೆ ಪಾಲ್ಗೊಂಡು ಸಾರ್ವಜನಿಕರಲ್ಲಿ ಮತದಾನ ಅರಿವು ಮೂಡಿಸುವ ಮೂಲಕ ಮತದಾನ ಪ್ರಮಾಣ ಹೆಚ್ಚಳಕ್ಕೆ ಸಹಕರಿಸಬೇಕು ಎಂದು ಕರೆ ನೀಡಿದರು.

ಬಳಿಕ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಆದ ಎಸ್.ಹೆಚ್.ಪುಷ್ಪಾಂಜಲಿ ದೇವಿ ಅವರು, ಮತದಾರರ ಪ್ರತಿಜ್ಞಾ ವಿಧಿ ಭೋದಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಯೋಜನಾಧಿಕಾರಿ ವಾಗೇಶ್ ಶಿವಾಚಾರ್ಯ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರು ಹಾಗೂ ವಕೀಲರಾದ ಎರ್ರಿಸ್ವಾಮಿ, ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ವಿವಿಧ ನ್ಯಾಯಾಲಯಗಳ ನ್ಯಾಯಾಧೀಶರು, ವಕೀಲರು ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ವಿಜ್ಞಾನ

# ಕಬ್ಬಿಣದ ವಸ್ತುಗಳು ಏಕೆ ತುಕ್ಕು ಹಿಡಿಯುತ್ತವೆ?

**ಆರ್.ಬಿ.ಗುರುಬಸವರಾಜ**

ಆಟವಾಡಲು ಹೊರಹೋಗಿದ್ದ ಉಮಾದೇವಿ ಮನೆಗೆ ಬಂದಳು. ಆ ವೇಳೆಯಲ್ಲಿ ಅವಳ ಮಾಮ ಕಬ್ಬಿಣದ ಗೇಟನ್ನು ಸ್ಯಾಂಡ್ ಪೇಪರ್‌ನಿಂದ ಸ್ವಚ್ಛಗೊಳಿಸುತ್ತಿದ್ದರು. ಇದನ್ನು ನೋಡುತ್ತಾ ನಿಂತ ಉಮಾದೇವಿಯ ಮನದಲ್ಲಿ ಪ್ರಶ್ನೆಯೊಂದು ಮೂಡಿತು. "ಮಾಮ ಗೇಟನ್ನು ಏಕೆ ಸ್ವಚ್ಛ ಮಾಡುತ್ತಿರುವೆ?" ಎಂದಳು. 'ಮಳೆಗಾಲ ಪ್ರಾರಂಭವಾಯ್ತಲ್ಲ. ಅದಕ್ಕೆ ಸ್ವಚ್ಛ ಮಾಡಿ ಪೇಂಟ್ ಮಾಡಬೇಕು. ಇಲ್ಲಾಂದ್ರೆ ಗೇಟ್ ತುಕ್ಕು ಹಿಡಿಯುತ್ತೆ' ಎಂದನು ಮಾಮ. "ಮಾಮ ಮಳೆಗಾಲದಲ್ಲಿ ಕಬ್ಬಿಣದ ವಸ್ತುಗಳು ಏಕೆ ತುಕ್ಕು ಹಿಡಿಯುತ್ತವೆ?" ಎಂದು ಮರುಪ್ರಶ್ನೆ ಹಾಕಿದಳು. ಮಾಮನ ಉತ್ತರದಿಂದ ಅವಳು ಕೊಂಚ ಸಮಾದಾನಗೊಂಡಳು. ಅದು ಹೀಗಿದೆ.

ಕಬ್ಬಿಣ, ನೀರು ಮತ್ತು ಆಮ್ಲಜನಕದ ನಡುವಿನ ರಾಸಾಯನಿಕ



ಕ್ರಿಯೆಯಿಂದಾಗಿ ಕಬ್ಬಿಣವು ತುಕ್ಕು ಹಿಡಿಯುತ್ತದೆ. ಕಬ್ಬಿಣವು ನೀರು ಮತ್ತು ಆಮ್ಲಜನಕಕ್ಕೆ ಒಡ್ಡಿಕೊಂಡಾಗ ಆಕ್ಸಿಡೀಕರಣ ಎಂಬ ಪ್ರಕ್ರಿಯೆಯು ಜರುಗುತ್ತದೆ. ಇದು ಕಬ್ಬಿಣವನ್ನು ವಿಘಟಿಸುತ್ತದೆ ಮತ್ತು ತುಕ್ಕು ರೂಪಿಸಲು ಕಾರಣವಾಗುತ್ತದೆ. ಮಳೆಗಾಲದಲ್ಲಿ ತೇವಾಂಶದ ಮಟ್ಟವು ಅಧಿಕವಾಗಿರುತ್ತದೆ ಮತ್ತು ಮಳೆನೀರು ತೇವಾಂಶದ ಹೇರಳವಾದ ಮೂಲವನ್ನು ಒದಗಿಸುತ್ತದೆ. ಕಬ್ಬಿಣವು ಈ ತೇವಾಂಶದೊಂದಿಗೆ ಸಂಪರ್ಕಕ್ಕೆ ಬಂದಾಗ ಅದು ತುಕ್ಕು ಹಿಡಿಯುತ್ತದೆ.

ತುಕ್ಕು ಎಂಬುದು ಕೆಂಪು–ಕಂದು ಬಣ್ಣದ ಕಬ್ಬಿಣದ ಆಕ್ಸೈಡ್ ಆಗಿದ್ದು, ಅದು ಆಮ್ಲಜನಕ ಕಬ್ಬಿಣದ ಮೇಲ್ಮೈಯಲ್ಲಿ ರೂಪುಗೊಳ್ಳುತ್ತದೆ. ಈ ಪ್ರತಿಕ್ರಿಯೆಯು ಒಂದು ರೀತಿಯ ಆಕ್ಸಿಡೀಕರಣವಾಗಿದೆ. ಇದು ಎಲೆಕ್ಟ್ರಾನ್‌ಗಳ ನಷ್ಟವನ್ನು ಒಳಗೊಂಡಿರುವ ರಾಸಾಯನಿಕ ಪ್ರಕ್ರಿಯೆಯಾಗಿದೆ. ಕಬ್ಬಿಣದ ಲೋಹವು ಆಮ್ಲಜನಕ ಮತ್ತು ನೀರಿನ ಅಣುಗಳಿಗೆ ಸಿಲುಕಿ ಎಲೆಕ್ಟ್ರಾನ್‌ಗಳನ್ನು ಕಳೆದುಕೊಳ್ಳುತ್ತದೆ. ಎಲೆಕ್ಟ್ರಾನ್‌ಗಳನ್ನು ಕಳೆದುಕೊಂಡ ಕಬ್ಬಿಣವು ಕಬ್ಬಿಣದ ಆಕ್ಸೈಡ್ ಅಥವಾ ತುಕ್ಕು ರೂಪಿಸುತ್ತದೆ. ನೀರಿನಲ್ಲಿ ಉಪ್ಪಿನ ಉಪಸ್ಥಿತಿಯಿಂದ ತುಕ್ಕು ಹಿಡಿಯುವ ಪ್ರಕ್ರಿಯೆಯು ವೇಗಗೊಳ್ಳುತ್ತದೆ. ಉದಾಹರಣೆಗೆ ಕೆಲ ಬೋರ್‌ವೆಲ್ ನೀರು ಉಪ್ಪಾಗಿದ್ದು, ಅಂತಹ ನೀರನ್ನು ಬಳಸುವ ಕಡೆಗಳಲ್ಲಿ ಕಬ್ಬಿಣವು ಬೇಗನೆ ತುಕ್ಕು ಹಿಡಿಯುತ್ತದೆ. ಇಲ್ಲಿ ಉಪ್ಪು ವಿದ್ಯುದ್ವಿಚ್ಛೇದ್ಯವಾಗಿ ಕಾರ್ಯನಿರ್ವಹಿಸುತ್ತದೆ. ನೀರಿನ ವಿದ್ಯುತ್ ವಾಹಕತೆಯನ್ನು ಹೆಚ್ಚಿಸುತ್ತದೆ ಮತ್ತು ತುಕ್ಕು ಹಿಡಿಯುವ ಪ್ರಕ್ರಿಯೆಯು ಹೆಚ್ಚು ವೇಗಗೊಳಿಸುತ್ತದೆ. ಕಬ್ಬಿಣದ ವಸ್ತುಗಳು ತುಕ್ಕು ಹಿಡಿಯದಿರಲು ಜಲನಿರೋಧಕ ವಸ್ತುಗಳಿಂದ ಮುಚ್ಚುವ ಮೂಲಕ ಅಥವಾ ತುಕ್ಕು–ನಿರೋಧಕ ಲೇಪನವನ್ನು (ಪೇಂಟ್) ಹಚ್ಚುವ ಮೂಲಕ ತುಕ್ಕು ಹಿಡಿಯುವುದನ್ನು ತಪ್ಪಿಸಬಹುದು.

# ಮೇ 3 ರಂದು ಪಂಜಿನ ಮೆರವಣಿಗೆ, ಮೇ 4 ಸಾಂಸ್ಕೃತಿಕ ಕಾರ್ಯಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಮತದಾನ ಪ್ರಮಾಣ ಹೆಚ್ಚಳ ಹಾಗೂ ನೈತಿಕ ಮತದಾನದ ಕುರಿತು ಅರಿವು ಮೂಡಿಸಲು ಮೇ 03 ರಂದು ಸಂಜೆ 07 ಗಂಟೆಗೆ ಮಹಾನಗರ ಪಾಲಿಕೆ ಕಚೇರಿ ಆವರಣದಿಂದ ಪಂಜಿನ ಮೆರವಣಿಗೆ ಏರ್ಪಡಿಸಲಾಗಿದೆ.

ಪಂಜಿನ ಮೆರವಣಿಗೆಯು ಮಹಾನಗರ ಪಾಲಿಕೆ ಕಚೇರಿ ಆವರಣದಿಂದ ಪ್ರಾರಂಭವಾಗಿ ಬೆಂಗಳೂರು ರಸ್ತೆ, ಬ್ರೂಸ್‌ಪೇಟೆ ಪೊಲೀಸ್ ಠಾಣೆ ಮುಂಭಾಗದಿಂದ ಹೆಚ್.ಆರ್. ಗವಿಯಪ್ಪ ವೃತ್ತದವರೆಗೂ ನಡೆಯಲಿದೆ.

**ಮೇ 04 ರಂದು ಸಾಂಸ್ಕೃತಿಕ ಕಾರ್ಯಕ್ರಮ:** ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಮತದಾನ ಪ್ರಮಾಣ ಹೆಚ್ಚಳ ಹಾಗೂ ಮತದಾನ ಜಾಗೃತಿಗಾಗಿ ಮೇ 04 ರಂದು ಸಂಜೆ 06 ಗಂಟೆಗೆ ನಗರದ ಹೆಚ್.ಆರ್. ಗವಿಯಪ್ಪ ವೃತ್ತ(ಮೋತಿ ವೃತ್ತ)ದ ಬಳಿ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷರೂ ಆಗಿರುವ ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ ಅವರು ತಿಳಿಸಿದ್ದಾರೆ.

# ಮತದಾನ ಜಾಗೃತಿಗೆ ಎತ್ತಿನ ಬಂಡಿ ಏರಿದ ಡಿಸಿ ಅತುಲ್



ಹಂಪಿ ಟೈಮ್ಸ್ ಕೊಪ್ಪಳ : ಸಾರ್ವತ್ರಿಕ ಲೋಕಸಭಾ ಚುನಾವಣೆ–2024 ರ ಅಂಗವಾಗಿ ಕೊಪ್ಪಳ ತಾಲೂಕಿನ ಅಳವಂಡಿ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಕೊಪ್ಪಳ ತಾಲೂಕ ಸ್ವೀಪ್ ಸಮಿತಿಯಿಂದ ಗುರುವಾರದಂದು ಎತ್ತಿನ ಬಂಡಿ ಜಾಥಾದಲ್ಲಿ ಡಿಸಿ ನಲಿನ್ ಅತುಲ್, ಜಿಪಂ ಸಿಇಒ ರಾಹುಲ್ ರತ್ನಂ ಪಾಂಡೆಯ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ ಎತ್ತಿನ ಬಂಡಿಯನ್ನು ಏರಿ ಮತದಾನ ಜಾಗೃತಿ ಮೂಡಿಸಿದ್ದು ಎಲ್ಲರ ಗಮನ ಸೆಳೆಯಿತು.

# ಶಾಖದ ದುಷ್ಪರಿಣಾಮ ತಗ್ಗಿಸಲು ಸಲಹೆಗಳು

**ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲೆಯಲ್ಲಿ ತೀವ್ರ ಶಾಖದ ಅಲೆ /ಅತಿಯಾದ ಉಷ್ಣಾಂಶದಿಂದಾಗಿ ನಾನಾ ರೀತಿಯ ಅನಾರೋಗ್ಯ ಪರಿಸ್ಥಿತಿಗಳು ಸಂಭವಿಸುವ ಸಾಧ್ಯತೆ ಇದ್ದು ಸಾರ್ವಜನಿಕ ಆರೋಗ್ಯ ಹಿತದೃಷ್ಟಿಯಿಂದ ಅತಿಯಾದ ಉಷ್ಣಾಂಶದಿಂದ ಸಂಭವಿಸಬಹುದಾದ ಅನಾರೋಗ್ಯ ಪರಿಸ್ಥಿತಿಗಳನ್ನು ತಡೆಗಟ್ಟುವಿಕೆಯ ನಿಟ್ಟಿನಲ್ಲಿ ಸಾರ್ವಜನಿಕರು ಆರೋಗ್ಯ ಸಂರಕ್ಷಣಾ ಸಲಹೆಗಳನ್ನು ಪಾಲಿಸಬೇಕು ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ತಿಳಿಸಿದ್ದಾರೆ.

**ಹೆಚ್ಚು ನೀರು ಕುಡಿಯುವುದು:** ಬಾಯಾರಿಕೆ ಇಲ್ಲದಿದ್ದರೂ ಸಹ ಸಾಕಷ್ಟು ಪ್ರಮಾಣದಲ್ಲಿ ಆಗಾಗ್ಗೆ ನೀರನ್ನು ಕುಡಿಯಬೇಕು. ಬಾಯಾರಿಕೆಯು ನಿರ್ಜಲೀಕರಣದ ಪ್ರಮುಖ ಲಕ್ಷಣವಾಗಿದೆ. ಪ್ರಯಾಣ ಮಾಡುವ ಸಂದರ್ಭದಲ್ಲೂ ಕುಡಿಯಲು ನೀರನ್ನು ಜೊತೆಗೆ ತೆಗೆದುಕೊಂಡು ಹೋಗಬೇಕು. ಪುನರ್ಜಲೀಕರಣ ದ್ರಾವಣ ಹಾಗೂ ಮನೆಯಲ್ಲಿಯೇ ಸಿದ್ದಪಡಿಸಿದ ಲಿಂಬು ಶರಬತ್ತು, ಮಜ್ಜಿಗೆ, ಲಸ್ಸಿ, ಹಣ್ಣಿನ ಜ್ಯೂಸ್‌ಗಳನ್ನು ಸ್ವಲ್ಪ ಉಪ್ಪಿನೊಂದಿಗೆ ಸೇವಿಸಬೇಕು. ಈ ಋತುವಿನಲ್ಲಿ ಸಿಗುವ ಹೆಚ್ಚಿನ ನೀರಿನ ಅಂಶವನ್ನು ಹೊಂದಿರುವ ಹಣ್ಣು ತರಕಾರಿಗಳಾದ ಕಲ್ಲಂಗಡಿ, ಕರಬೂಜ, ಮೂಸಂಬಿ, ದ್ರಾಕ್ಷಿ, ಅನಾನಸ್, ಸೌತೆಕಾಯಿ ಹಾಗೂ ಸ್ಥಳೀಯವಾಗಿ ಸಿಗುವ ಹಣ್ಣು ತರಕಾರಿಗಳನ್ನು ಸೇವಿಸಬೇಕು. ಎಳನೀರನ್ನು ಸೇವಿಸಬೇಕು.

**ಸೂಕ್ತ ಉಡುಪನ್ನು ಧರಿಸುವುದು:** ಹಗುರವಾದ, ತಿಳಿ ಬಣ್ಣದ, ಸಡಿಲವಾದ ಹತ್ತಿ ಬಟ್ಟೆಗಳನ್ನು ಧರಿಸಬೇಕು. ಬಿಸಿಲಿನಲ್ಲಿ ನಡೆಯುವಾಗ ಸೂರ್ಯನ ನೇರ ಕಿರಣಗಳಿಂದ ರಕ್ಷಣೆ ಪಡೆಯಲು ತಲೆಯನ್ನು ಮುಚ್ಚುವಂತಹ ಟೋಪಿ, ಛತ್ರಿ ಹಾಗೂ ಸಾಂಪ್ರದಾಯಿಕವಾಗಿ ಬಳಸುವ ಟವೆಲ್ ಅನ್ನು ಬಳಸಬೇಕು.

**ಸದಾ ಎಚ್ಚರಿಕೆಯಿಂದಿರಬೇಕು:** ಸ್ಥಳೀಯ ಹವಮಾನದ ಬಗ್ಗೆ ರೇಡಿಯೋ, ಟಿ.ವಿ ಹಾಗೂ ದಿನಪತ್ರಿಕೆಗಳಲ್ಲಿ ಬರುವ ಮಾಹಿತಿಯ ಬಗ್ಗೆ ತಿಳಿದುಕೊಂಡು ಸದಾ ಎಚ್ಚರಿಕೆಯಲ್ಲಿರಬೇಕು.

**ಸಾಧ್ಯವಾದಷ್ಟು ಒಳಾಂಗಣದಲ್ಲೇ ಇರಬೇಕು:** ಉತ್ತಮ ಗಾಳಿ ಇರುವ ಹಾಗೂ ತಂಪಾಗಿರುವ ಪ್ರದೇಶದಲ್ಲಿರಬೇಕು. ಸೂರ್ಯನ ಶಾಖ ಹಾಗೂ ಬಿಸಿಗಾಳಿಯು ಹಗಲು ಹೊತ್ತಿನಲ್ಲಿ ನೇರವಾಗಿ ಮನೆಯ ಒಳಗಡೆ ಪ್ರವೇಶವಾಗದಂತೆ ಮನೆಯ ಕಿಟಕಿ ಹಾಗೂ ಕರ್ಟನ್‌ಗಳನ್ನು ಮುಚ್ಚಬೇಕು. ಹಾಗೂ ರಾತ್ರಿಯ ಸಮಯದಲ್ಲಿ ತಂಪಾದ ಗಾಳಿಯ ಸಂಚಾರಕ್ಕೆ ಕಿಟಕಿಗಳನ್ನು ತೆರೆದಿಡಬೇಕು.

**ದುರ್ಬಲ ವ್ಯಕ್ತಿಗಳಿಗೆ:** ಯಾವುದೇ ಸಮಯದಲ್ಲಿ ಪ್ರತಿಯೊಬ್ಬರಿಗೂ ಬಿಸಿಗಾಳಿಯ ಒತ್ತಡ ಹಾಗೂ ಅತಿಯಾದ ಉಷ್ಣಾಂಶದಿಂದಾಗಿ ಅಪಾಯವಾಗುವ ಸಾಧ್ಯತೆ ಇರುತ್ತದೆ. ಆದರೆ ಈ ಕೆಳಕಾಣಿಸಿರುವ ಗುಂಪಿನ ಜನರಿಗೆ ಬೇರೆಯವರಿಗಿಂತ ಹೆಚ್ಚಿನ ಅಪಾಯವಾಗುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಹೆಚ್ಚುವರಿ ಗಮನ ನೀಡುವುದು ಅವಶ್ಯಕವಾಗಿರುತ್ತದೆ. ನವಜಾತ ಶಿಶುಗಳು ಹಾಗೂ ಚಿಕ್ಕಮಕ್ಕಳು, ಗರ್ಭಿಣಿಯರು, ಹೊರಾಂಗಣದಲ್ಲಿ ಕೆಲಸ ನಿರ್ವಹಿಸುವವರು, ಮಾನಸಿಕ ಕಾಯಿಲೆಗಳಿಂದ ಬಳಲುತ್ತಿರುವವರು, ಆರೋಗ್ಯ ಸಮಸ್ಯೆಗಳಿರುವವರು ಅದರಲ್ಲೂ ಹೃದಯರೋಗ ಮತ್ತು ಅಧಿಕ ರಕ್ತದ ಒತ್ತಡ ಇರುವವರು, ತಂಪಾದ ವಾತಾವರಣ ಪ್ರದೇಶದಿಂದ ಅತಿಯಾದ ಉಷ್ಣಾಂಶವಿರುವ ಪ್ರದೇಶಕ್ಕೆ ಭೇಟಿ ನೀಡುವವರ ಬಗ್ಗೆ ಹೆಚ್ಚಿನ ಜಾಗ್ರತೆ ವಹಿಸಬೇಕು.

**ಇತರೆ ಮುನ್ನೆಚ್ಚರಿಕೆ ಕ್ರಮಗಳು:** ಏಕಾಂಗಿಯಾಗಿ ವಾಸಿಸುವ ಹಿರಿಯ ವೃದ್ದರು ಹಾಗೂ ರೋಗಿಗಳ ಆರೋಗ್ಯ ಸ್ಥಿತಿಯನ್ನು ಪ್ರತಿನಿತ್ಯ ಮೇಲುಸ್ತುವಾರಿ ಮಾಡಬೇಕು. ಮನೆಯ ಒಳಾಂಗಣವನ್ನು ತಂಪಾಗಿರುವಂತೆ ನೋಡಿಕೊಳ್ಳುವುದು ಹಗಲು ಹೊತ್ತಿನಲ್ಲಿ ಮನೆಯ ಕೆಳಗಿನ ಅಂತಸ್ತುಗಳಲ್ಲಿ ಇರುವುದು ಉತ್ತಮ. ಫ್ಯಾನ್ ಅಥವಾ ತೇವವಾದ ಬಟ್ಟೆಗಳನ್ನು ಬಳಸಿ ದೇಹವನ್ನು ತಂಪಾಗಿಡಬೇಕು.

**ಸಾರ್ವಜನಿಕರು ಏನು ಮಾಡಬಾರದು:** ಮಧ್ಯಾಹ್ನ 12.00 ರಿಂದ 3.00 ರವರೆಗೆ ಬಿಸಿಲಿಗೆ ಹೋಗುವುದನ್ನು ತಪ್ಪಿಸಬೇಕು. ಅಧಿಕ ಬಿಸಿಲಿರುವ ಸಮಯದಲ್ಲಿ ಅಡುಗೆ ಮಾಡುವುದನ್ನು ತಪ್ಪಿಸಬೇಕು. ಮದ್ಯಪಾನ (ಆಲ್ಕೋಹಾಲ್), ಟೀ, ಕಾಫಿ ಮತ್ತು ಕಾರ್ಬೋನೇಟೆಡ್ ತಂಪು ಪಾನೀಯಗಳು ಅಥವಾ ಹೆಚ್ಚು ಸಕ್ಕರೆ ಅಂಶವನ್ನು ಹೊಂದಿದ ಪಾನೀಯಗಳನ್ನು ಸೇವಿಸುವುದನ್ನು ತಪ್ಪಿಸಬೇಕು. ಇವು ದೇಹವನ್ನು ನಿರ್ಜಲೀಕರಣ ಹಾಗೂ ಹೊಟ್ಟೆ ನೋವನ್ನು ಉಂಟು ಮಾಡುತ್ತವೆ. ಚಿಕ್ಕ ಮಕ್ಕಳನ್ನು ಹಾಗೂ ಸಾಕು ಪ್ರಾಣಿಗಳನ್ನು ನಿಲುಗಡೆ ಮಾಡಿರುವ ವಾಹನಗಳಲ್ಲಿ ಬಿಡಬಾರದು. ವಾಹನಗಳ ಒಳಾಂಗಣದಲ್ಲಿನ ಹೆಚ್ಚಿನ ತಾಪಮಾನವು ಅಪಾಯಕಾರಿಯಾಗಬಹುದು. ಸಲಹೆ ಪಾಲಿಸಿ ಆರೋಗ್ಯ ರಕ್ಷಣೆ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

# ಮೇ 13 ರಂದು ಪಿಂಚಣಿ ಅದಾಲತ್

**ಹಂಪಿ ಟೈಮ್ಸ್ ಬಳ್ಳಾರಿ**

ಕಾರ್ಮಿಕರ ಭವಿಷ್ಯ ನಿಧಿ ಪ್ರಾದೇಶಿಕ ಕಚೇರಿ ಬಳ್ಳಾರಿ ಇವರ ವತಿಯಿಂದ ಪಿಂಚಣಿದಾರರ ಕುಂದುಕೊರತೆಗಳನ್ನು ಆಲಿಸಿ ಪರಿಹಾರ ಒದಗಿಸಲು ಮೇ 13 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಬಳ್ಳಾರಿ ಪ್ರಾದೇಶಿಕ ಕಚೇರಿಯಲ್ಲಿ ಪಿಂಚಣಿ ಅದಾಲತ್ ಏರ್ಪಡಿಸಲಾಗಿದೆ. ಬಳ್ಳಾರಿ, ಕೊಪ್ಪಳ, ವಿಜಯನಗರ ಮತ್ತು ಚಿತ್ರದುರ್ಗ ಜಿಲ್ಲೆಗಳ ಪಿಂಚಣಿದಾರರು ತಮ್ಮ ಕುಂದುಕೊರತೆಗಳಿದ್ದಲ್ಲಿ ಬಳ್ಳಾರಿಯ ಪ್ರಾದೇಶಿಕ ಕಚೇರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿ, ಇವರಿಗೆ ಪತ್ರ ಅಥವಾ ಇ–ಮೇಲ್ ಮೂಲಕ ತಮ್ಮ ಪಿ.ಪಿ.ಓ ಸಂಖ್ಯೆ ವಿಳಾಸ, ದೂರವಾಣಿ, ಮೊಬೈಲ್ ಸಂಖ್ಯೆ, ಕುಂದು ಕೊರತೆಯ ಸ್ವರೂಪ ಇತ್ಯಾದಿಗಳನ್ನು ಬರೆದು ಪತ್ರ ಮೂಲಕ ಮೇ 10 ರೊಳಗೆ ಕಳುಹಿಸಬಹುದು. ಪತ್ರ, ಲಕೋಟೆಯ ಮೇಲೆ ಪಿಂಚಣಿ ಅದಾಲತ್ ಎಂದು ಬರೆಯಬೇಕು. ಹೆಚ್ಚಿನ ಮಾಹಿತಿಗಾಗಿ ದೂ.08392–268943 ಗೆ ಸಂಪರ್ಕಿಸಬಹುದು.

# ಮತಗಟ್ಟೆಗಳ ಸಿದ್ಧತೆ ಖಾತ್ರಿಪಡಿಸಿಕೊಳ್ಳಿ

**ಮೊದಲ ಪುಟದಿಂದ**

ಬಹಿರಂಗ ಸಭೆಗೆ ಅನುಮತಿಯಿಲ್ಲ. ಎಲ್ಲಾ ಜಿಲ್ಲಾ ವ್ಯಾಪ್ತಿಯಲ್ಲಿ ರೆಸಾರ್ಟ್, ಹೋಟೆಲ್ ಮುಚ್ಚಲು ಕ್ರಮ ವಹಿಸಬೇಕು. ಕ್ಷೇತ್ರದ ಮತದಾರರಲ್ಲದವರನ್ನು ಕ್ಷೇತ್ರದಿಂದ ಹೊರ ನಡೆಸಬೇಕು ಎಂದು ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಅವರು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದರು.

48 ಗಂಟೆಗಳ ಮುಂಚಿನ ಅವಧಿಯಲ್ಲಿ ಪ್ರಕಟಗೊಳ್ಳುವ ಜಾಹೀರಾತುಗಳಿಗೆ ಮಾಧ್ಯಮ ಪ್ರಮಾಣೀಕರಣ ಸಮಿತಿಯಿಂದ ಅನುಮೋದನೆಗೊಂಡಿರಬೇಕು. ಮತದಾನಕ್ಕೆ ನಿಗದಿಪಡಿಸಿದ ಅವಧಿ ಕೊನೆಗೊಳ್ಳುವುದಕ್ಕಿಂತ 48 ಗಂಟೆಗಳ ಮುಂಚೆ ಯಾವುದೇ ಮುದ್ರಣ ಮಾಧ್ಯಮದಲ್ಲಿ ಜಾಹೀರಾತು ಪ್ರಕಟಿಸಬೇಕಾದರೆ ಸಂಬಂಧಪಟ್ಟ ಅಭ್ಯರ್ಥಿ ಅಥವಾ ಪಕ್ಷವು ಮಾಧ್ಯಮ ಪ್ರಮಾಣೀಕರಣ ಸಮಿತಿಯಿಂದ ಪ್ರಮಾಣಪತ್ರ ಪಡೆದುಕೊಳ್ಳುವುದು ಕಡ್ಡಾಯವಾಗಿದ್ದು, ನಿಗಾ ವಹಿಸಲು ಎಲ್ಲಾ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಸೂಚಿಸಿದರು.

ಟಿವಿ, ರೇಡಿಯೋ, ಸ್ಥಳೀಯ ಕೇಬಲ್ ನೆಟ್‌ವರ್ಕ್ ಮತ್ತು ಎಲ್ಲ ಡಿಜಿಟಲ್ ಮಾಧ್ಯಮಗಳು ಮತದಾನ ಪೂರ್ವ 48 ಗಂಟೆಗಳ ಅವಧಿಯಲ್ಲಿ ಚುನಾವಣೆ ಸಂಬಂಧಿತ ವಿಷಯಗಳು ಪ್ರಸಾರ ಮಾಡದಂತೆ ಕ್ರಮವಹಿಸಬೇಕು ಎಂದರು.

ಮತದಾನ ದಿನದಂದು, ಮತಗಟ್ಟೆಗಳಿಗೆ ಚುನಾವಣಾಧಿಕಾರಿಗಳನ್ನು ಹೊರತುಪಡಿಸಿ, ಮತ್ಯಾರು ಮೊಬೈಲ್ ಬಳಸುವಂತಿಲ್ಲ. ಮತದಾರರೂ ಕೂಡ ಮತಗಟ್ಟೆ ಕೇಂದ್ರಗಳ ಒಳಗಡೆ ತರದಂತೆ ನೋಡಿಕೊಳ್ಳಬೇಕು. ಮತಗಟ್ಟೆ ಕೇಂದ್ರಗಳ 100 ಮೀ. ವ್ಯಾಪ್ತಿಯಲ್ಲಿ ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಜಾಗೃತರಾಗಿರಬೇಕು ಎಂದು ತಿಳಿಸಿದರು.

ಈ ವೇಳೆ ಅಪರ ಮುಖ್ಯ ಚುನಾವಣಾಧಿಕಾರಿ ಎಂ.ಕೂರ್ಮಾರಾವ್, ವೆಂಕಟೇಶ್ ಅವರು ಇದ್ದರು.

ವಿಡಿಯೋ ಸಂವಾದದಲ್ಲಿ ಜಿಲ್ಲಾ ಮಟ್ಟದಿಂದ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಸ್ವೀಪ್ ನೋಡೆಲ್ ಅಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು, ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA